**ವಿಷಯ ಸಂಖ್ಯೆ:** 171.01 (ಅ)

**ವಿಷಯ** : ದಿನಾಂಕ: 21.01.2023 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 170 **ನೇ ಸಾಮಾನ್ಯ ಸಭೆಯ** ನಡವಳಿಯನ್ನು ಸ್ಥಿರೀಕರಿಸುವ ಬಗೆಗೆ.

* * * *

**ದಿನಾಂಕ: 21.01..2023** ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 170 ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ ವ್ಯವಸ್ಥಾಪನಾ ಮಂಡಳಿಯ ಮುಂದೆ ವಿಷಯ ಮಂಡಿಸಿದೆ.

**ಕುಲಸಚಿವ**

ವಿಷಯ ಸಂಖ್ಯೆ: 171.02

**ವಿಷಯ:-** ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಗೌರವ ಸಂಭಾವನೆ, ಪ್ರೋತ್ಸಾಹಧನವನ್ನು ನಿಗದಿಗೊಳಿಸುವ ಬಗ್ಗೆ.

**ಉಲ್ಲೇಖ:-** 1) ದಿನಾಂಕ: 21.01.2023ರಂದು ನಡೆದ ವ್ಯವಸ್ಥಾಪನ ಮಂಡಳಿ ಸಭೆಯ ತೀರ್ಮಾನ (ವಿಷಯ ಸಂಖ್ಯೆ-170.4)

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24.02.2023.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ರಾಜ್ಯದ ವಿವಿಧೆಡೆ ಸ್ಥಾಪಿಸಿರುವ ಮತ್ತು ಮುಂದೆ ಸ್ಥಾಪಿಸಲಾಗುವ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಗೌರವ ಸಂಭಾವನೆ, ಪ್ರೋತ್ಸಾಹಧನವನ್ನು ನಿಗಧಿಗೊಳಿಸುವ ಬಗ್ಗೆ ದಿನಾಂಕ: 21.01.2023ರಂದು ನಡೆದ 170ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಪ್ರವೇಶಾತಿಗೆ ನಿಗಧಿಪಡಿಸಿದ ಒಟ್ಟಾರೆ ಶುಲ್ಕದಲ್ಲಿ ಶೇಕಡ 20%ರಷ್ಟನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರೋತ್ಸಾಹಧನವನ್ನು ಪಾವತಿಸಲು ತೀರ್ಮಾನಿಸಲಾಗಿತ್ತು. ಈ ಸಂದರ್ಭದಲ್ಲಿ ಸ್ನಾತಕ ವಿಷಯಗಳಿಗೆ ಮಾತ್ರ (ಪ್ರಥಮ, ದ್ವಿತೀಯ ಮತ್ತು ತೃತೀಯ) ಮೂರು ವರ್ಷದ ಕಾರ್ಯಕ್ರಮಗಳಿಗೆ ಶೇಕಡ 20%ರಷ್ಟು ಪ್ರೋತ್ಸಾಹ ಧನವನ್ನು ಪಾವತಿಸಲು ತೀರ್ಮಾನಿಸಲಾಗಿತ್ತು. ಆದರೆ ಸ್ನಾತಕೋತ್ತರ, ಪಿಜಿ ಡಿಪ್ಲೋಮಾ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರೋತ್ಸಾಹ ಧನವನ್ನು ಪಾವತಿಸಲು ವಿಷಯ ಮಂಡನೆಯಾಗಿರಲಿಲ್ಲ ಎಂಬ ಅಂಶವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅವಗಾಹನೆಗೆ ತರಲಾಗಿದೆ.

- ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ಸ್ನಾತಕ ಮತ್ತು ಸ್ನಾತಕೋತ್ತರ, ಪಿಜಿ ಡಿಪ್ಲೋಮಾ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿದ ಪ್ರವೇಶಾತಿ ಶುಲ್ಕದಲ್ಲಿ ಕಾರ್ಯಕ್ರಮ/ಕೋರ್ಸ್‌ಗಳಿಗೆ ಪ್ರತಿ ವಿದ್ಯಾರ್ಥಿಯ ಪ್ರವೇಶಾತಿ ಶುಲ್ಕದಲ್ಲಿ ಶೇಕಡ 20%ರಷ್ಟು ಪ್ರೋತ್ಸಾಹಧನದ ಮೊತ್ತವನ್ನು ವಿಶ್ವವಿದ್ಯಾನಿಲಯದಿಂದ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪಾವತಿಸುವ ಅನುಮೋದನೆಗಾಗಿ.
- ಮುಂದುವರಿದು ಕರಾಮುವಿ ವತಿಯಿಂದ ಸರ್ಕಾರಿ ಕಾಲೇಜುಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿದ್ದಲ್ಲಿ ಈ ಹಿಂದೆ ನಿಗಧಿಪಡಿಸಲಾಗಿರುವಂತೆ ಗೌರವ ಸಂಭಾವನೆಯನ್ನು ಮುಂದುವರಿಸಲು ಅನುಮೋದನೆಗಾಗಿ.

ಈ ಮೇಲಿನ ಎರಡು ವಿಷಯಗಳಿಗೆ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಹಾಗೂ 170ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಲಾದ ವಿಷಯಕ್ಕೆ ಸದರಿ ವಿಷಯವನ್ನು ಸೇರ್ಪಡೆಗೊಳಿಸಿ ಅನುಸಮರ್ಥನೆ ಪಡೆಯಲು ವಿಷಯ ಸಿದ್ಧಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿದೆ.

**ಕರಡು ಮಾನ್ಯ ಕುಲಪತಿಗಳಿಂದ ಅನುಮೋದನೆಗೊಂಡಿರುತ್ತದೆ.**

**ಕುಲಸಚಿವ** 10/03/2023

ವಿಷಯ ಸಂಖ್ಯೆ: 171.03

**ವಿಷಯ:-** ಕ.ರಾ.ಮು.ವಿ.ಯ ಪ್ರಾದೇಶಿಕ ಕೇಂದ್ರ ಕಚೇರಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ಅಗತ್ಯವಿರುವ ಸ್ಥಳಗಳಲ್ಲಿ ನೂತನವಾಗಿ ಪ್ರಾರಂಭಿಸುವ ಬಗ್ಗೆ.

**ಉಲ್ಲೇಖ:-** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 03.03.2023.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಶಯವಾದ "ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ" ಎಂಬ ಧ್ಯೇಯ ವಾಕ್ಯದಂತೆ ಉನ್ನತ ಶಿಕ್ಷಣದಿಂದ ವಂಚಿತರಾದವರಿಗೆ, ಹಿಂದುಳಿದವರಿಗೆ, ದೀನದಲಿತರಿಗೆ, ಬಡವರಿಗೆ ಹಾಗೂ ಗುಡ್ಡಗಾಡು ಅರಣ್ಯದಂಚಿನ ಬಡಮಕ್ಕಳಿಗೆ ದೂರಶಿಕ್ಷಣದ ಮೂಲಕ ಉನ್ನತ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ನೀಡುವ ಸದುದ್ದೇಶದಿಂದ ರಾಜ್ಯದ 23 ಜಿಲ್ಲಾಕೇಂದ್ರಗಳಲ್ಲಿ ಈಗಾಗಲೇ ಪ್ರಾದೇಶಿಕ ಕೇಂದ್ರ ಕಚೇರಿಗಳನ್ನು ಪ್ರಾರಂಭಿಸಿದ್ದು, ಇವುಗಳು ಕಾರ್ಯನಿರ್ವಹಿಸುತ್ತಿವೆ.

ಉಳಿದಂತೆ ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ ಮತ್ತು ಹಲವಾರು ಪ್ರಾಂತ್ಯಗಳಲ್ಲಿ ಉನ್ನತ ಶಿಕ್ಷಣವನ್ನು ನೀಡುವ ಉದ್ದೇಶದಿಂದ ರಾಜ್ಯದ ಉಳಿದ ಜಿಲ್ಲಾ ಕೇಂದ್ರಗಳಲ್ಲಿ 11 ಹೊಸ ಪ್ರಾದೇಶಿಕ ಕೇಂದ್ರ ಕಚೇರಿಗಳನ್ನು ನೂತನವಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಪಟ್ಟಿ ಈ ಕೆಳಕಂಡಂತಿದೆ.

| ಕ್ರಮ.ಸಂ | ನೂತನವಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ ಪ್ರಾದೇಶಿಕ ಕೇಂದ್ರಗಳ ಪಟ್ಟಿ. |
|---|---|
| 1 | ರಾಯಚೂರು |
| 2 | ಯಾದಗಿರಿ |
| 3 | ವಿಜಯಪುರ |
| 4 | ಕೊಪ್ಪಳ |
| 5 | ಹಾವೇರಿ |
| 6 | ಗದಗ |
| 7 | ಚಿತ್ರದುರ್ಗ |
| 8 | ಚಿಕ್ಕಬಳ್ಳಾಪುರ |
| 9 | ಬೆಂಗಳೂರು(ಕೆ.ಆರ್.ಪುರಂ) |
| 10 | ಮೈಸೂರು (ಮಾದರಿ ಪ್ರಾದೇಶಿಕ ಕೇಂದ್ರ) |
| 11 | ಶ್ರೀ ಸಾಲೂರು ಬೃಹನ್ಮಠ ಶ್ರೀ ಮಲೆಮಹದೇಶ್ವರ ಬೆಟ್ಟ |

ಮುಂದುವರೆದು ಕ್ರಮ ಸಂಖ್ಯೆ-11ಕ್ಕೆ ಸಂಬಂಧಿಸಿದಂತೆ ಶ್ರೀ ಮಲೆಮಹದೇಶ್ವರ ಕೃಪಾ ಎಜುಕೇಷನ್ ಸೊಸೈಟಿ ಮಹದೇಶ್ವರ ಬೆಟ್ಟ, ಇಲ್ಲಿ ಪ್ರಾದೇಶಿಕ ಕೇಂದ್ರ ಕಚೇರಿ ತೆರೆಯಲು ಉದ್ದೇಶಿಸಿ ಶ್ರೀ ಸಾಲೂರು ಬೃಹನ್ಮಠದ ಕಾರ್ಯದರ್ಶಿಗಳನ್ನು ಪತ್ರದ ಮುಖೇನ ಸ್ಥಳಾವಕಾಶವನ್ನು ನೀಡಲು ಕೋರಿದ ಸಂದರ್ಭದಲ್ಲಿ ಮಠದ ವಿದ್ಯಾಸಂಸ್ಥೆಯ ಅಧ್ಯಕ್ಷರು ಒಪ್ಪಿಗೆ ಸೂಚಿಸಿ ಶ್ರೀ ಮಹದೇಶ್ವರ ಬೆಟ್ಟದಲ್ಲಿ ನಡೆಸಲ್ಪಡುತ್ತಿರುವ ಪ್ರೌಢಶಾಲೆಯಲ್ಲಿ 2-ಕೊಠಡಿಗಳನ್ನು ಒದಗಿಸಲು ಒಪ್ಪಿ ದಿನಾಂಕ:16.02.2023ರಂದು ಒಪ್ಪಿಗೆ ಪತ್ರ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಇಲ್ಲಿಯೂ ಸಹ ಹೊಸ ಪ್ರಾದೇಶಿಕ ಕೇಂದ್ರ ಕಚೇರಿಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದ್ದು. ಸದರಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಮುಂದೆ ಮಂಡಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಸಂಬಂಧದ ವಿಷಯವನ್ನು ಸಿದ್ಧಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ತೀರ್ಮಾನಕ್ಕಾಗಿ.

ಕರಡು ಮಾನ್ಯ ಕುಲಪತಿಗಳಿಂದ ಅನುಮೋದನೆಗೊಂಡಿರುತ್ತದೆ.

ಕುಲಸಚಿವ

ವಿಷಯ ಸಂಖ್ಯೆ: 171.04

ವಿಷಯ: ಶ್ರೀಮತಿ ಶಶಿರೇಖಾ ಡಿ. W/o ಲೇಟ್ ಎಸ್.ಎ.ಶಶಿಕುಮಾರ್, ಇವರು ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಿ ಸಲ್ಲಿಸಿರುವ ಮನವಿ ಬಗೆಗೆ.

****

ಶ್ರೀಮತಿ ಶಶಿರೇಖಾ ಡಿ. W/o ಲೇಟ್ ಎಸ್.ಎ.ಶಶಿಕುಮಾರ್, ಇವರು ದಿನಾಂಕ:09.02.2023 ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ "ತಮ್ಮ ಪತಿಯಾದ ಶ್ರೀ ಎಸ್.ಎ.ಶಶಿಕುಮಾರ್, ವಿಶ್ವವಿದ್ಯಾನಿಲಯದ ಖಾಯಂ ನೌಕರರಾಗಿದ್ದು ದಿನಾಂಕ:20.01.2023 ರಂದು ಮರಣ ಹೊಂದಿರುವುದಾಗಿ ತಿಳಿಸಿ, ಅವರ ಧರ್ಮಪತ್ನಿಯಾದ ನಾನು ಬಿ.ಕಾಂ., ಪದವಿಧರಳಾಗಿದ್ದು, ನಮಗೆ ಒಬ್ಬ ಪುತ್ರನಿರುತ್ತಾನೆ. ನನ್ನ ಪತಿಯವರ ಮರಣದಿಂದಾಗಿ ನನ್ನ ಕುಟುಂಬ ನಿರ್ವಹಣೆ ಹಾಗೂ ಮಗನು ಖಾಸಗಿಯಾಗಿ ಎಂ.ಬಿ.ಬಿ.ಎಸ್., ವಿದ್ಯಾಭ್ಯಾಸ ಮಾಡುತ್ತಿದ್ದು, ಆರ್ಥಿಕವಾಗಿ ತೊಂದರೆಯಾಗುತ್ತಿರುವುದರಿಂದ, ದಯಮಾಡಿ ನನ್ನ ವಿದ್ಯಾರ್ಹತೆಗೆ ಅನುಗುಣವಾಗಿ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಬೇಕಾಗಿ ಕೋರಿ ಮನವಿ ಪತ್ರ ಸಲ್ಲಿಸಿರುತ್ತಾರೆ.

ಮೃತರ ಪತ್ನಿಯಾದ ಶ್ರೀಮತಿ ಶಶಿರೇಖಾ ಡಿ., ಆದ ನನಗೆ ಅನುಕಂಪದ ಆಧಾರದ ನೌಕರಿಯನ್ನು ಕೊಡಬೇಕೆಂದು ದಿನಾಂಕ:09.02.2023ರಂದು ಮನವಿ ಸಲ್ಲಿಸಿರುತ್ತಾರೆ.

ಶ್ರೀಮತಿ ಶಶಿರೇಖಾ ಡಿ. W/o ಲೇಟ್ ಎಸ್.ಎ.ಶಶಿಕುಮಾರ್, ಇವರು ಅನುಕಂಪದ ಆಧಾರದ ಮೇಲಿನ ನೌಕರಿಗೆ ಅರ್ಜಿ ಸಲ್ಲಿಸಿದ ದಿನಾಂಕಕ್ಕೆ 45 ವರ್ಷ 04 ತಿಂಗಳು ಪೂರೈಸಿದ್ದು, ವಿದ್ಯಾರ್ಹತೆಯಾಗಿ ಬಿ.ಕಾಂ., ಪದವಿಯನ್ನು ಹೊಂದಿರುವುದು ಅವರು ಸಲ್ಲಿಸಿರುವ ದಾಖಲೆಗಳ ಪ್ರಕಾರ ತಿಳಿದು ಬಂದಿರುತ್ತದೆ.

ಮುಂದುವರೆದು, (1) ದಿ. ಎಸ್.ಎ.ಶಶಿಕುಮಾರ್, ಮರಣ ಸಮರ್ಥನಾ ಪತ್ರ (2) ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ (3) ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಛಾಯಾ ಪ್ರತಿ (4) ವರ್ಗಾವಣೆ ಪತ್ರದ ಛಾಯಾ ಪ್ರತಿ ಮತ್ತು ಸಂಚಿತ ಶೈಕ್ಷಣಿಕ ದಾಖಲೆಯ ಛಾಯಾ ಪ್ರತಿ (5) ಬಿ.ಕಾಂ., ಪದವಿಯ ಅಂಕಪಟ್ಟಿಗಳ ಛಾಯಾ ಪ್ರತಿ (ಮೂರು), ಮತ್ತು ಬಿ.ಕಾಂ., ಪದವಿಯ ಪ್ರಮಾಣ ಪತ್ರದ ಛಾಯಾ ಪ್ರತಿ (6) ಆದಾಯ ಮತ್ತು ಜಾತಿ ದೃಢೀಕರಣ ಪತ್ರ (7) ಓಟರ್ ಐಡಿಯ ಛಾಯಾ ಪ್ರತಿ (08) ಆಧಾರ ಕಾರ್ಡ್‌ನ ಛಾಯಾ ಪ್ರತಿ (09) ರೇಷನ್ ಕಾರ್ಡ್‌ನ ಛಾಯಾ ಪ್ರತಿ (10) ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ – ಮನವಿ ಅರ್ಜಿಯೊಂದಿಗೆ ಸದರಿ ದಾಖಲೆಗಳನ್ನು ಸ್ವಯಂ ದೃಢೀಕರಣ ಮಾಡಿ ಸಲ್ಲಿಸಿರುತ್ತಾರೆ. ಸದರಿ ದಾಖಲೆಗಳನ್ನು ತಮ್ಮ ಅವಗಾಹನೆಗಾಗಿ ಕಡತದಲ್ಲಿ ಲಗತ್ತಿಸಿದೆ.

ಶ್ರೀ.ಎಸ್.ಎ.ಶಶಿಕುಮಾರ್, ಇವರು ನೇರ ನೇಮಕಾತಿ ಅಧಿಕೃತ ಜ್ಞಾಪನ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ2/ಎ.ನೇ/542/2007–08, ದಿನಾಂಕ:22.11.2007ರ ಮೂಲಕ ಎಲೆಕ್ಟ್ರೀಷಿಯನ್ ಹುದ್ದೆಗೆ ನೇಮಕಗೊಂಡು ದಿನಾಂಕ:23.11.2007 ರಂದು ಪೂರ್ವಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ದಿನಾಂಕ:20.01.2023 ರಂದು ಅಕಾಲಿಕ ಮರಣ ಹೊಂದಿರುತ್ತಾರೆ. ಮರಣದ ಸಂದರ್ಭದಲ್ಲಿ ಸಹಾಯಕ ಅಭಿಯಂತರ(ಎಲೆಕ್ಟ್ರಿಕಲ್) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 26 ಸೇಅನೇ 2018 ಬೆಂಗಳೂರು, ದಿನಾಂಕ:09.04.2021ರಲ್ಲಿನ ಕ್ರಮ ಸಂಖ್ಯೆ 5. ನಿಯಮ 4ರ ತಿದ್ದಪಡಿ(2)ರಲ್ಲಿ "ಪರಂತು, ಈ ನಿಯಮಗಳ ಅಡಿಯಲ್ಲಿ ನೇಮಕಾತಿಯನ್ನು ಕೋರುವ ಮೃತ ಸರ್ಕಾರಿ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿಗೆ ಈ ಮೇಲೆ ನಿರ್ದಿಷ್ಟಪಡಿಸಿರುವ ವಯೋಮಿತಿಯು ಅನ್ವಯವಾಗತಕ್ಕದ್ದಲ್ಲ. ಈ ಅವಲಂಬಿತರ ವಯೋಮಿತಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ಐವತ್ತೈದು ವರ್ಷಗಳನ್ನು ಮೀರತಕ್ಕದ್ದಲ್ಲ ಎಂದು ತಿಳಿಸಲಾಗಿರುತ್ತದೆ."

ಲೇಟ್ ಎಸ್.ಎ.ಶಶಿಕುಮಾರ್, ರವರು ತಮ್ಮ ಸೇವಾ ವಹಿಯಲ್ಲಿ ನೀಡಿರುವ ಅವಲಂಬಿತರ ಮಾಹಿತಿಯಲ್ಲಿ ಪತ್ನಿಯಾಗಿ ಶ್ರೀಮತಿ ಶಶಿರೇಖಾ ಡಿ., ಮಗನಾಗಿ ಎಸ್.ಬಾನುಪ್ರಕಾಶ್, ಇವರುಗಳ ಮಾಹಿತಿಯನ್ನು ನೀಡಿರುತ್ತಾರೆ. ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧ ಕರಾಮುವಿನಿಲಯವು ಪರಿನಿಯಮಾವಳಿಯನ್ನು ರಚಿಸಿಕೊಂಡಿರುತ್ತಾರೆ.

ಕರ್ನಾಟಕ ನಾಗರೀಕ ಸೇವೆಗಳು (Appointment on Compassionate Grounds) ನಿಯಮ 1996 ರಲ್ಲಿ ಅನುಕಂಪದ ಆದಾರದ ಮೇಲೆ ಉದ್ಯೋಗ ನೀಡುವ ಕುರಿತು ತಿಳಿಸಲಾಗಿರುವ ಅರ್ಹತೆ ಮತ್ತು ಷರತ್ತುಗಳು ಹಾಗೂ ತತ್ಸಂಬಂಧ ಲೇಟ್ ಶ್ರೀ ಎಸ್.ಎ.ಶಶಿಕುಮಾರ್, ರವರ ಪತ್ನಿಯ ಸಂಬಂಧಿಸಿದ ಮಾಹಿತಿಯು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ಕೆ.ಸಿ.ಎಸ್. ನಿಯಮದಲ್ಲಿ ತಿಳಸಲಾಗಿರುವ ಅರ್ಹತೆ ಮತ್ತು ಷರತ್ತುಗಳು | ತತ್ಸಂಬಂಧ ಮಾಹಿತಿ |
|---|---|---|
| | **Eligibility for appointment**<br>1. Appointment on compassionate ground under these rules shall not be claimed as a matter of right and shall not be given as a matter of course. | 1. -- |
| | 2. Appointment under these rules shall be restricted to the dependent of a deceased Government servant in the following order of preference namely-<br>[(i) in the case of the deceased female Government servant<br>(a) a son; | 2.(a) ಶ್ರೀಮತಿ ಶಶಿರೇಖಾ ಡಿ., ಇವರು ಲೇಟ್ ಶ್ರೀಎಸ್.ಎ.ಶಶಿಕುಮಾರ್, ರವರ ಪತ್ನಿಯಾಗಿರುತ್ತಾರೆ. |
| | 3. An adopted son or daughter a deceased Government servant shall not be eligible for appointment under these rules [2][(4) A person against whom at the time of making application a criminal case is under investigation or trial, on the charge of having committed murder of the deceased Government servant or for abetting the commission of such offence shall not be eligible for appointment under these rules.] | 3. ಅನ್ವಯಿಸುವುದಿಲ್ಲ |
| | 4.Conditions of appointment – Appointment on compassionate grounds under these rules shall vi subject to the following conditions namely<br>(1) The family of the deceased Government servant should be in a financial crisis or destitution.<br>(2) Person seeking appointment shall be within the age limit specified for the post in the relevant rules of recruitment specially made in respect of any service or post read with sub-rule (3) of Rule ^ of the Karnataka Civil Serves ( General Recruitment) Rules, 1977 and where it is not so specified such person shall be within the age limits specified in the Karnataka Civil Services ( General Recruitment) Rules, 1977 | 4.ಶ್ರೀಮತಿ ಶಶಿರೇಖಾ ಡಿ., ಇವರು ಸಲ್ಲಿಸಿರುವ ಕುಟುಂಬದ ಆದಾಯ ದೃಡೀಕರಣ ಪತ್ರದಲ್ಲಿ ವಾರ್ಷಿಕ ರೂ.80,000/- ಮತ್ತು ಹಾಗೂ ಹಿಂದುಳಿದ ವರ್ಗ ಪ್ರವರ್ಗ III(ಎ) ರಲ್ಲಿ ಬರುವ ಒಕ್ಕಲಿಗ ಜಾತಿಗೆ ಸೇರಿರುತ್ತಾರೆಂದು ದಾಖಲಿಸಲಾಗಿರುತ್ತದೆ (ತಹಶೀಲ್ದಾರರು, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರು ನೀಡಿರುವ ದೃಢೀಕರಣ ಪತ್ರ ಸಂಖ್ಯೆ: RD5018882756745 ದಿನಾಂಕ:07.02.2023). ಶ್ರೀಮತಿ ಶಶಿರೇಖಾ ಡಿ., ಇವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿಯವರ ಜನ್ಮ ದಿನಾಂಕ:10.10.1977(ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ) ಆಗಿದ್ದು, ಅರ್ಜಿ ಸಲ್ಲಿಸಿದ ದಿನಾಂಕಕ್ಕೆ 45 ವರ್ಷ 04 ತಿಂಗಳು ಪೂರೈಸಿರುತ್ತಾರೆ ಕ್ರಮ ಸಂಖ್ಯೆ 3 ಮತ್ತು 4 ರ ಷರತ್ತುಗಳಿಗೆ ಸಂಬಂಧಿಸಿದಂತೆ ಶ್ರೀಮತಿ ಶಶಿರೇಖಾ ಡಿ., ಇವರು |

(3) Person seeking appointment should posses the minimum qualification specified for the post in the relevant rules of recruitment specially made in respect of any service or post;

(4) Appointment shall be confide to any post in Group 'C' or Group 'D' depending upon the qualification specified for the post but excluding the posts carrying the pay scales higher than the scale of pay of the post of Assistant in the Karnataka Government Secretariat as may be revised from time to time and any other post in either of the groups as may be specified by the Government from time to time

(5) Appointment shall be made only against a direct recruitment vacancy.

(6) Appointment shall be made in the department in which the deceased Government servant was working.

ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿಯವರು ಶೈಕ್ಷಣಿಕ ವಿದ್ಯಾರ್ಹತೆ ಬಿ.ಕಾಂ., ಪದವಿಯನ್ನು ಹೊಂದಿರುವುದು ಕಂಡುಬಂದಿರುತ್ತದೆ. ಕರಾಮುವಿ ನಿಲಯವು ರಚಿಸಿಕೊಂಡಿರುವ C&R ನಿಯಮದ ಪ್ರಕಾರ ಶ್ರೀಮತಿ ಶಶಿರೇಖಾ ಡಿ., ಇವರ ಶೈಕ್ಷಣಿಕ ವಿದ್ಯಾರ್ಹತೆ ಯನ್ನು ಪರಿಗಣಿಸಿ ಕರಾಮುವಿ ನಿಲಯದಲ್ಲಿ ನೇರ ನೇಮಕಾತಿಯಡಿಯಲ್ಲಿನ ಗ್ರೂಪ್ "ಸಿ" ವರ್ಗದ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

| ವಿವರ | ದ್ವಿದಗು | ಪ್ರದಗು |
|---|---|---|
| ಸೃಜನೆಯಾದ ಹುದ್ದೆಗಳು | 138 | 77 |
| 371 ಜೆ ರಡಿ ಮೀಸಲಾದ ಹುದ್ದೆಗಳು | 11 | 07 |
| 371 ಜೆ ರಡಿ ಮೀಸಲಾದ ಹುದ್ದೆಗಳನ್ನುಹೊರತುಪಡಿಸಿ ಉಳಿಯುವ ಹುದ್ದೆಗಳು | 127 | 70 |
| ಹಾಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು | 78 | 68 |
| ಖಾಲಿ ಇರುವ ಹುದ್ದೆಗಳು | 60 | 09 |

ಪ್ರಥಮ ದರ್ಜೆ ಗುಮಾಸ್ತ ಒಟ್ಟು 77 ಹುದ್ದೆಗಳು ಸೃಜನೆಯಾಗಿದ್ದು, 50ರ ಅನುಪಾತದಲ್ಲಿ ನೇರ ನೇಮಕಾತಿಗೆ 38 ಹಾಗೂ ಪದೋನ್ನತಿಗೆ 39 ಹುದ್ದೆಗಳನ್ನು ಮೀಸಲಿರಿಸಿದ್ದು. ಇದರಲ್ಲಿ 371(ಜೆ)ಗೆ ಸೇರಿದ 03 ಪದೋನ್ನತಿ ಹುದ್ದೆಗಳು ಸೇರಿದಂತೆ 39 ಪದೋನ್ನತಿ ಹುದ್ದೆಗಳಿಗೆ ಪದೋನ್ನತಿ ನೀಡಲಾಗಿರುತ್ತದೆ, 38 ನೇರ ನೇಮಕಾತಿ ಹುದ್ದೆಗಳಲ್ಲಿ ಅನುಕಂಪದ ಅಧಾರದ ಮೇಲೆ 02 ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಮತ್ತು 27 ನೇರ ನೇಮಕಾತಿ ಹುದ್ದೆಗಳಲ್ಲಿ ಪದೋನ್ನತಿ ಪಡೆದು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಬಾಕಿ 09 ಹುದ್ದೆಗಳು ಉಳಿದಿದ್ದು, ಇದರಲ್ಲಿ 371(ಜೆ)ಗೆ 04 ಹುದ್ದೆಗಳನ್ನು ಮೀಸಲಿರಿಸಿದ್ದು, ಬಾಕಿ **05** ನೇರ ನೇಮಕಾತಿ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗಳು ಖಾಲಿ ಇರುತ್ತವೆ.

ದ್ವಿತೀಯ ದರ್ಜೆ ಗುಮಾಸ್ತ ಒಟ್ಟು 138 ಹುದ್ದೆಗಳು ಸೃಜನೆಯಾಗಿದ್ದು, 371(ಜೆ)ಗೆ ಒಟ್ಟು 11 ಹುದ್ದೆಗಳನ್ನು ಮೀಸಲಿರಿಸಲಾಗಿರುತ್ತದೆ. ಉಳಿಕೆ 127 ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳನ್ನು 50:25ರ ಅನುಪಾತದಲ್ಲಿ ನೇರ ನೇಮಕಾತಿಗೆ 95 ಹಾಗೂ ಪದೋನ್ನತಿಗೆ 32 ಹುದ್ದೆಗಳನ್ನು ಮೀಸಲಿರಿಸಿದ್ದು. 32 ಪದೋನ್ನತಿ ಹುದ್ದೆಗಳಲ್ಲಿ 19 ಪದೋನ್ನತಿ ಹುದ್ದೆಗಳಿಗೆ ಪದೋನ್ನತಿ ನೀಡಲಾಗಿದ್ದು, ಬಾಕಿ 13 ಪದೋನ್ನತಿ ಹುದ್ದೆಗಳು ಖಾಲಿ ಇರುತ್ತವೆ ಹಾಗೂ 95 ನೇರ ನೇಮಕಾತಿ ಹುದ್ದೆಗಳಲ್ಲಿ 56 ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಹಾಗೂ ಅನುಕಂಪದ ಅಧಾರದ ಮೇಲೆ 03 ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಬಾಕಿ **36** ನೇರ ನೇಮಕಾತಿ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳು ಖಾಲಿ ಇರುತ್ತವೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಅಭಿಯಂತರ (ಎಲೆಕ್ಟ್ರಿಕಲ್)ರಾಗಿ ಕಾರ್ಯ ನಿರ್ವಹಿಸುತ್ತಿದ್ದ ದಿವಂಗತ ಎಸ್.ಎ.ಶಶಿಕುಮಾರ್, ಇವರ ಪತ್ನಿಯಾದ ಶ್ರೀಮತಿ ಶಶಿರೇಖಾ ಡಿ., ಇವರು ತನ್ನ ಪತಿಯ ಮರಣದ ಹಿನ್ನೆಲೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಮನವಿಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

08/03/2023
ಕುಲಸಚಿವ

ಮಾನ್ಯ ಕುಲಪತಿಗಳಿಂದ ಕರಡು ಅನುಮೋದಿಸಲ್ಪಟ್ಟಿದೆ.

ವಿಷಯ ಸಂಖ್ಯೆ: 171.05

ಶ್ರೀ. ಪುಟ್ಟಣ್ಣ, ವಿಧಾನ ಪರಿಷತ್ ಸದಸ್ಯರು, ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ, ಮೈಸೂರು, ರವರು ಕರಾಮುವಿಯ ವಿವಿಧ ಮಾಹೆಗಳ ಆದಾಯ ಮತ್ತು ಖರ್ಚು ವೆಚ್ಚಗಳ ಪಟ್ಟಿಯನ್ನು ಸಿದ್ದಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸುವಂತೆ ದಿನಾಂಕ 16.11.2022ರ ಪತ್ರದಲ್ಲಿ ಕೋರಿದ್ದು, ಸದರಿಯವರು ಕೋರಿರುವ ವಿವರಗಳನ್ನು ಸಿದ್ದಪಡಿಸಿ ವ್ಯವಸ್ಥಾಪನಾ ಮಂಡಳಿ ಸಭೆಗೆ ಮರು ಮಂಡಿಸಲಾಗಿದೆ.

ಕರಡು ಪ್ರತಿ ಮಾನ್ಯ ಕುಲಪತಿಯವರಿಂದ ಅನುಮೋದಿಸಲ್ಪಟ್ಟಿದೆ.

ಹಣಕಾಸು ಅಧಿಕಾರಿ

ವಿಷಯ ಸಂಖ್ಯೆ: 171.06

**ವಿಷಯ:**– ಎಲ್ಲಾ ಸ್ನಾತಕ ವಿಜ್ಞಾನ ವಿಷಯಗಳ ಸಂಪರ್ಕ ಕಾರ್ಯಕ್ರಮ ಮತ್ತು ಪ್ರಾಯೋಗಿಕ ತರಗತಿಗಳಿಗೆ ಸಂಬಂಧಿಸಿದ ಸಂಭಾವನೆಗಳ/ಭತ್ಯೆಗಳನ್ನು ನಿಗಧಿಪಡಿಸಿರುವುದಕ್ಕೆ ವ್ಯವಸ್ಥಾಪನಾ ಮಂಡಳಿಯ ಅನುಸಮರ್ಥನೆ ಪಡೆಯುವ ಬಗ್ಗೆ.

**ಉಲ್ಲೇಖ:**– 1) ವಿಭಾಗದ ಮುಖ್ಯಸ್ಥರ ಮನವಿ ಪತ್ರ ದಿನಾಂಕ: 30.01.2023.
2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 09.02.2023.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ವಿಜ್ಞಾನ ಕಾರ್ಯಕ್ರಮಗಳ ಸಂಪರ್ಕ ಕಾರ್ಯಕ್ರಮಗಳು ಮತ್ತು ಪ್ರಾಯೋಗಿಕ ತರಗತಿಗಳಿಗೆ ಸಂಭಾವನೆ ಮತ್ತು ಭತ್ಯೆಗಳನ್ನು ನಿಗಧಿಪಡಿಸಿ ಕೊಡುವಂತೆ ಉಲ್ಲೇಖ(2)ರ ಮನವಿ ಪತ್ರದಲ್ಲಿ ಎಲ್ಲಾ ವಿಭಾಗದ ಮುಖ್ಯಸ್ಥರುಗಳು ಮನವಿಯನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಸದರಿ ಮನವಿಯನ್ನು ಪರಿಶೀಲಿಸಿ ಉಲ್ಲೇಖ(1)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕಚೇರಿ ಆದೇಶ ಹೊರಡಿಸಲಾಗಿರುತ್ತದೆ ಎಂಬ ಅಂಶವನ್ನು ಸಭೆಯ ಅವಗಾಹನೆಗೆ ತರಲಾಗಿದೆ.

ಎಲ್ಲಾ ಸ್ನಾತಕ ವಿಜ್ಞಾನ ಕಾರ್ಯಕ್ರಮಗಳನ್ನು 2021–22ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಿದ್ದು, ಸದರಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ನಡೆಸಲಾಗುವ ಸಂಪರ್ಕ ಕಾರ್ಯಕ್ರಮಗಳು ಮತ್ತು ಪ್ರಾಯೋಗಿಕ ತರಗತಿಗಳಿಗೆ ಬೋಧನೆ ಮಾಡುವ ಅಧ್ಯಾಪಕರು/ಪ್ರಾಧ್ಯಾಪಕರುಗಳಿಗೆ ಸಂಭಾವನೆ ಮತ್ತು ಭತ್ಯೆಗಳನ್ನು ಹಾಗೂ ಪ್ರಯೋಗಾಲಯದ ತರಗತಿಗಳಲ್ಲಿ ಕಾರ್ಯಕ್ರಮದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಸಂಭಾವನೆಗಳನ್ನು ನಿಗಧಿಪಡಿಸಿ ಈ ಸಂಬಂಧ ಆದೇಶ ಹೊರಡಿಸಿದ್ದು, ಸದರಿ ಪ್ರಸ್ತಾವನೆಗೆ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆ ಕೋರಿ ವಿಷಯವನ್ನು ಸಿದ್ಧಪಡಿಸಿ ಮಂಡಿಸಿದೆ.

ಕರಡು ಮಾನ್ಯ ಕುಲಪತಿಗಳಿಂದ ಅನುಮೋದನೆಗೊಂಡಿರುತ್ತದೆ.

ಕುಲಸಚಿವ

**ವಿಷಯ ಸಂಖ್ಯೆ: 171.07**

**ವಿಷಯ: ವಿಜಯಪುರದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಉದ್ದೇಶಕ್ಕಾಗಿ ಸಿ.ಎ.ನಿವೇಶನವನ್ನು ಪಡೆಯುವ ಬಗೆಗೆ.**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾದೇಶಿಕ ಕೇಂದ್ರಗಳ ಮುಖಾಂತರ ರಾಜ್ಯದ ಎಲ್ಲೆಡೆ ವಿಸ್ತರಿಸುವ ಉದ್ದೇಶದಿಂದ ಎಲ್ಲಾ ಜಿಲ್ಲೆಗಳಲ್ಲಿ ಜಮೀನು/ಸಿ.ಎ. ನಿವೇಶನವನ್ನು ಪಡೆಯಲು ನಿರಂತರ ಪ್ರಯತ್ನ ಮಾಡುತ್ತಾ ಬಂದಿದೆ. ಇದಕ್ಕೆ ಸಂಬಂಧಿಸಿದಂತೆ ವಿಜಯಪುರ ನಗರದಲ್ಲಿ ಖಾಲಿ ಇರುವ ನಾಗರೀಕ ಸೌಲಭ್ಯವುಳ್ಳ ನಿವೇಶನಗಳನ್ನು 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ:-12-03-2023 ರಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರಾರಂಭಿಕ ಠೇವಣಿ ಮೊತ್ತದೊಂದಿಗೆ ದಿನಾಂಕ:-27-03-2023 ರೊಳಗೆ ಅರ್ಜಿ ಸಲ್ಲಿಸಲು ತಿಳಿಸಿರುತ್ತಾರೆ. ಈ ಪ್ರಕಟಣೆಯಲ್ಲಿರುವ ವಿಜಯಪುರದ ಅಥಣಿ ರಸ್ತೆ ಎಡಭಾಗ, ನವರಸಪುರ, ಸರ್ವೆ ನಂ. 45, ನಿವೇಶನದ ಸಂಖ್ಯೆ 51 ರ ಜಾಗವನ್ನು ಸ್ಥಳ ಪರಿಶೀಲನೆ ಮಾಡಲು ನಮ್ಮ ವಿ.ವಿ.ಯ ಸಿಬ್ಬಂದಿಯಾದ ಬಾಗಲಕೋಟೆ ಪ್ರಾದೇಶಿಕ ಕೇಂದ್ರದ ಶ್ರೀ.ಗುರಪ್ಪ.ಕೆ.ಪಾಟೀಲ್, ಪ್ರಥಮ ದರ್ಜೆ ಗುಮಾಸ್ತರು, ರವರನ್ನು ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಕಳುಹಿಸಲಾಗಿ, ಸದರಿಯವರು ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಭೂಮಾಪಕರೊಂದಿಗೆ ಖುದ್ದು ಸ್ಥಳ ಪರಿಶೀಲನೆ ಮಾಡಿ, ಅಥಣಿ ರಸ್ತೆ ಎಡಭಾಗ, ನವರಸಪುರ, ಸರ್ವೆ ನಂ. 45 ರ ಜಾಗವು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಕರಾಮುವಿಗೆ ಸೂಕ್ತವಾಗಿದೆ ಎಂಬ ಅಭಿಪ್ರಾಯವನ್ನು ನೀಡಿರುತ್ತಾರೆ.

- ಸಿ.ಎ. ನಿವೇಶನದ ಸಂಖ್ಯೆ 51, ಸರ್ವೆ ನಂ. 45/ಬ, ವಿಸ್ತೀರ್ಣ 6029.41 ಚ.ಮೀ.
  ಅಥಣಿ ರಸ್ತೆ ಎಡಭಾಗ, ನವರಸಪುರ, ವಿಜಯಪುರ.
  ನೋಂದಣಿ ಶುಲ್ಕ-ರೂ. 7000/-
  ನಿವೇಶನದ ಒಟ್ಟು ಮೊತ್ತ ರೂ. 2,92,00,000/-(ಎರಡು ಕೋಟಿ ತೊಂಬತ್ತೆರಡು ಲಕ್ಷ ರೂ.ಗಳು ಮಾತ್ರ)
  ಕರಾಮುವಿಯು ಸರ್ಕಾರದ ಸ್ವಾಯುತ್ತ ಶೈಕ್ಷಣಿಕ ಸಂಸ್ಥೆಯಾಗಿರುವುದರಿಂದ ಶೇ.50% ರಿಯಾಯಿತಿ ಇರುವುದರಿಂದ ಒಟ್ಟು ಮೊತ್ತದಲ್ಲಿ ಶೇ.50% ರಷ್ಟು ರೂ. 1,46,00,000/- (ಒಂದು ಕೋಟಿ ನಲವತ್ತಾರು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಪಾವತಿ ಮಾಡಬೇಕಾಗುತ್ತದೆ.

ಮೇಲ್ಕಂಡ ನಾಗರೀಕ ಸೌಲಭ್ಯವುಳ್ಳ ನಿವೇಶನದ ಗುತ್ತಿಗೆಯ ಒಟ್ಟು ಮೊತ್ತ ರೂ. 1,46,00,000/- (ಒಂದು ಕೋಟಿ ನಲವತ್ತಾರು ಲಕ್ಷ ರೂಪಾಯಿಗಳು ಮಾತ್ರ) ಹಾಗೂ ನೋಂದಣಿ ಶುಲ್ಕ ರೂ. 7000/- ಗಳನ್ನು ಪಾವತಿ ಮಾಡಿ ಅರ್ಜಿ ಸಲ್ಲಿಸಿ ಕರಾಮುವಿಗೆ ಪಡೆಯುವ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

**ಕುಲಸಚಿವ**

(ಕರಡು ಪ್ರತಿ ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

ವಿಷಯ ಸಂಖ್ಯೆ : 171.08

**ವಿಷಯ** : ಶ್ರೀ ಸುಧೀರ್ ಸಿ ಎಸ್, ಸಹಾಯಕ ಅಭಿಯಂತರ, ಇಂಜಿನಿಯರಿಂಗ್ ವಿಭಾಗ, ಕರಾಮುವಿ, ಮೈಸೂರು, ಇವರಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಮುಂಬಡ್ತಿ ನೀಡುವ ಕುರಿತು.

******

ಶ್ರೀ ಸುಧೀರ್ ಸಿ ಎಸ್, ಸಹಾಯಕ ಅಭಿಯಂತರ, ಇಂಜಿನಿಯರಿಂಗ್ ವಿಭಾಗ, ಕರಾಮುವಿ, ಮೈಸೂರು, ಇವರು ಪ್ರಸ್ತುತ ವಿ.ವಿ.ನಿಲಯದಲ್ಲಿ ಖಾಲಿ ಇರುವ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಮುಂಬಡ್ತಿ ನೀಡುವಂತೆ ಕೋರಿ ದಿನಾಂಕ:03.03.2023 ರಂದು ಮನವಿಯನ್ನು ಸಲ್ಲಿಸಿದ್ದು, ಶ್ರೀ ಸುಧೀರ್ ಸಿ.ಎಸ್, ಇವರು ಗ್ರಾಜುಯೇಟ್ ಇಂಜಿನಿಯರ್ ಹುದ್ದೆಗೆ ದಿನಾಂಕ:19.01.2000 ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದು, ಸದರಿಯವರಿಗೆ ಕಾಲಿಕ ವೇತನ ಶ್ರೇಣಿಯನ್ನು ದಿನಾಂಕ:01.07.2011 ರಿಂದ ಜಾರಿಗೊಳಿಸಲಾಗಿದ್ದು, ಸದರಿಯವರನ್ನು ಸಹಾಯಕ ಅಭಿಯಂತರ ಖಾಯಂ ಹುದ್ದೆಯಲ್ಲಿ ವಿಲೀನಗೊಳಿಸಲಾಗಿರುವ ಸಂಬಂಧ ಅನುಸರಿಸಲಾಗಿರುವ ಕ್ರಮಗಳನ್ನು ಅವಗಾಹನೆಗಾಗಿ ತರಲಾಗಿದೆ.

- ದಿನಾಂಕ: 06.03.2021 ರಂದು ನಡೆದ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿಯ 164 ನೇ ವಿಷಯ ಸಂಖ್ಯೆ 164.07ರ ತೀರ್ಮಾನದಲ್ಲಿ ನ್ಯಾಯಮೂರ್ತಿ ಡಾ.ಕೆ ಭಕ್ತವತ್ಸಲ, ಏಕ ಸದಸ್ಯ ಸತ್ಯ ಶೋಧನಾ ಸಮಿತಿಯ ವರದಿಯ ಶಿಫಾರಸ್ಸಿನನ್ವಯ ವಿಶ್ವವಿದ್ಯಾನಿಲಯದಲ್ಲಿ 10 ವರ್ಷಗಳ ಕಾಲ ನಿರಂತರ ಸೇವೆ ಸಲ್ಲಿಸಿರುವ ನೌಕರರನ್ನು ಮಂಜೂರಾದ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ "absorb" ಮಾಡುವುದು ಸೂಕ್ತವೆಂದು ತೀರ್ಮಾನಿಸಿ, ಈ ಸಂಬಂಧ ಸರ್ಕಾರದಿಂದ ರಚಿತವಾದ ವಿ.ವಿ.ನಿಲಯದ ಅಧ್ಯಾಪಕೇತರ ನೇಮಕಾತಿ ಮಂಡಳಿಯ ಸದಸ್ಯರ ಪೈಕಿ ಒಬ್ಬರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ, ಸದರಿ ಸಮಿತಿಯ ಶಿಫಾರಸ್ಸಿನ್ವಯ ಕ್ರಮ ಜುರುಗಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಗಿರುತ್ತದೆ.
- ವ್ಯವಸ್ಥಾಪನಾ ಮಂಡಳಿಯ ತೀರ್ಮಾನದನ್ವಯ, ಬೋಧಕೇತರ ನೇಮಕಾತಿ ಮಂಡಳಿ ಸದಸ್ಯರ ಅಧ್ಯಕ್ಷತೆಯಲ್ಲಿ ವ್ಯವಸ್ಥಾಪನಾ ಮಂಡಳಿ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ನೀಡಿರುವ ವರದಿಯನ್ನು ಪರಿಶೀಲಿಸಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ದಿನಾಂಕ:05.02.2022 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 167ನೇ ಸಾಮಾನ್ಯ ಸಭೆಯಲ್ಲಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಗಿರುತ್ತದೆ.
- ಅದರಂತೆ, ವಿಶ್ವವಿದ್ಯಾನಿಲಯದಲ್ಲಿ ಕಾಲಿಕ ವೇತನ ಶ್ರೇಣಿಯಲ್ಲಿ ಹತ್ತು ವರ್ಷಗಳ ಸೇವೆಯನ್ನು ಪೂರೈಸಿರುವ 75 ಅರ್ಹ ನೌಕರರನ್ನು ಅವರುಗಳು ವಿಶ್ವವಿದ್ಯಾನಿಲಯದ ತಾತ್ಕಾಲಿಕ ಸೇವೆಗೆ ವರದಿ ಮಾಡಿಕೊಂಡ ದಿನಾಂಕದಿಂದ ಸೇವಾ ಜೇಷ್ಠತೆಯ ಆಧಾರದ ಮೇಲೆ, ವಿವಿ ನಿಲಯದಲ್ಲಿ ನೇರ ನೇಮಕಾತಿಗೆ ಚಾಲ್ತಿಯಲ್ಲಿರುವ ಪರಿನಿಯಮಗಳನ್ವಯ ವಿದ್ಯಾರ್ಹತೆ ಹಾಗೂ ಮೀಸಲಾತಿ ನಿಯಮಗಳನ್ನು ಅನುಸರಿಸಿ, ಸರ್ಕಾರದಿಂದ ಮಂಜೂರಾಗಿ ನೇರ ನೇಮಕಾತಿಗೆ ಖಾಲಿ ಇರುವ ಸಮಾನ ಖಾಲಿ ಹುದ್ದೆಗಳಲ್ಲಿ ದಿನಾಂಕ:01.06.2022 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ಸೇವೆಯಲ್ಲಿ ವಿಲೀನಗೊಳಿಸಿ ವಿ.ವಿ.ನಿಲಯದ ಅಧಿಕೃತ ಜ್ಞಾಪನ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/1001/2022-23, ದಿನಾಂಕ:01.08.2022 ರಲ್ಲಿ ಆದೇಶಿಸಲಾಗಿರುತ್ತದೆ.
- ದಿನಾಂಕ:26.08.2022 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 169ನೇ ಸಾಮಾನ್ಯ ಸಭೆಗೆ, ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದ ಸುಸೂತ್ರ ಆಡಳಿತ ನಿರ್ವಹಣೆ ದೃಷ್ಟಿಯಿಂದ ಕೈಗೊಂಡಿರುವ ಕೆಲವು ಆಡಳಿತಾತ್ಮಕ ವಿಷಯಗಳಲ್ಲಿ, 75 ಮಂದಿಯನ್ನು ಖಾಲಿಯಿದ್ದ ಸಮಾನ ಖಾಯಂ ಹುದ್ದೆಗಳಲ್ಲಿ ವಿಲೀನಗೊಳಿಸಿರುವ ಸಂಬಂಧದ ವರದಿಯನ್ನು ಮಂಡಿಸಲಾಗಿದ್ದು, ಸದರಿ ವಿಷಯದ ಬಗ್ಗೆ ವಿವರಣೆಯನ್ನು

ಪಡೆದುಕೊಂಡ ಸಭೆಯು ಇದುವರೆಗೆ ವಿ.ವಿ.ನಿಲಯವು ಕೈಗೊಂಡಿರುವ ಕ್ರಮವನ್ನು ಸರ್ವಾನುಮತದಿಂದ ಒಪ್ಪಿರುತ್ತದೆ.

- ಮಾನ್ಯ ಕುಲಪತಿಗಳು ಮಂಡಿಸಲಾಗಿದ್ದ, ಸದರಿ ವರದಿಯು ವ್ಯವಸ್ಥಾಪನಾ ಮಂಡಳಿಯಯಲ್ಲಿ ಅನುಸಮರ್ಥನೆಗೊಂಡಿರುವ ಹಿನ್ನೆಲೆಯಲ್ಲಿ, ಸದರಿಯರುಗಳಿಗೆ ಕಾಲಿಕ ವೇತನ ಶ್ರೇಣಿಯನ್ನು ಜಾರಿಗೊಳಿಸಿದ ದಿನಾಂಕ:01.07.2011 ರಿಂದ ಕಾಲ್ಪನಿಕ ವೇತನ ಬಡ್ತಿಯನ್ನು ನಿಗದಿಪಡಿಸಿ ಆರ್ಥಿಕ ಸೌಲಭ್ಯಗಳನ್ನು ಸೇವೆಯಲ್ಲಿ ವಿಲೀನಗೊಳಿಸಿರುವ ದಿನಾಂಕ:01.06.2022 ರಿಂದ ಪೂರ್ವಾನ್ವಯವಾಗಿ ಜಾರಿಗೊಳಿಸಿ ದಿನಾಂಕ:03.10.2022 ರಂದು ಆದೇಶ ಹೊರಡಿಸಲಾಗಿರುತ್ತದೆ.
- ವಿಶ್ವವಿದ್ಯಾನಿಲಯಕ್ಕೆ ಸರ್ಕಾರಿ ಪತ್ರ ಸಂಖ್ಯೆ:ಇಡಿ 22 ಯುಓವಿ 2007, ದಿನಾಂಕ:10.07.2007 ರಲ್ಲಿ 01 ಸಹಾಯಕ ಕಾರ್ಯಪಾಲಕ ಹುದ್ದೆ ಸೇರಿದಂತೆ, ವಿವಿಧ 195 ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಿರುತ್ತದೆ ಹಾಗೂ ವಿ.ವಿ.ನಿಲಯವು 01 ಹುದ್ದೆಯನ್ನು ಪರಿನಿಯಮದ ಮೂಲಕ ಸೃಜನೆಯಾಗಿರುತ್ತದೆ.
- ಸರ್ಕಾರದ ನಿರ್ದೇಶನದನ್ವಯ ಕರಾಮುವಿಯಲ್ಲಿ ಅನುಚ್ಛೇಧ 371 ಜೆ ರನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಅನ್ವಯವಾಗುವಂತೆ ಸ್ಥಳಿಯ ವೃಂದ ರಚಿಸಿ ದಿನಾಂಕ: 27.01.2017 ರನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರ 02 ಹುದ್ದೆಗಳಲ್ಲಿ 01 ಹುದ್ದೆಯನ್ನು ಪದೋನ್ನತಿಗೆ ಹಾಗೂ 01 ಹುದ್ದೆಯನ್ನು ನಿಯೋಜನೆಗೆ ಎಂದು ಗುರುತಿಸಲಾಗಿದ್ದು, ಪದೋನ್ನತಿಗೆ ಮೀಸಲಾಗಿದ್ದ ಹುದ್ದೆಯನ್ನು ಶ್ರೀ ವಿನೋದ್ ಎಂ.ಪಿ, ಇವರಿಗೆ ಪದೋನ್ನತಿ ನೀಡಲಾಗಿದ್ದು, ಪ್ರಸ್ತುತ ನಿಯೋಜನೆಗೆ ಗುರುತಿಸಲಾಗಿರುವ ಒಂದು ಹುದ್ದೆ ಖಾಲಿ ಇರುತ್ತದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ವಿ.ವಿ.ನಿಲಯವು ಪರಿನಿಯಮದ ಮೂಲಕ ನೇರ ನೇಮಕಾತಿ ಹಾಗೂ ಪದೋನ್ನತಿಗೆ ವಿದ್ಯಾರ್ಹತೆ ಹಾಗೂ ಮಾನದಂಡಗಳನ್ನು ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ.

**Qualification and Experience for Assistant Executive Engineeer**

**For Direct Recruitment:** Must be holder of Bachelor Degree in Engineering (Civil) or AMIE (Civil) from a Govt, recognized University/Institution.
Must have Experience in planning and constructional works;

**For Promotion:** Must have passed Diploma in Civil/Electrical Engineering from Institute recognized by the Technical Board;
**Method or Recruitment:** Promotion from the cadre of Assistant Engineer (Civil/Electrical) who has put in not less than three years' service as Assistant Engineer (Civil/Electrical) if no suitable or qualified candidate is available, then the post may be filled up by promotion from the Cadre of Junior Engineer (Civil/Electrical) who has put in not less than 5 years' service as Junior Engineer (Civil/Electrical) If no qualified candidate is available for promotion, then the post may be filled up by Direct Recruitment or by Deputation from any Govt. Department, ಎಂದಿರುತ್ತದೆ.

- ಶ್ರೀ ಸುಧೀರ್ ಸಿ.ಎಸ್, ಸಹಾಯಕ ಅಭಿಯಂತರ, ಇವರನ್ನು ನಿಯೋಜನೆಗೆ ಗುರುತಿಸಲಾಗಿರುವ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗೆ ಪದೋನ್ನತಿಗೆ ಪರಿಗಣಿಸುವುದಾದಲ್ಲಿ, ಸದರಿಯವರೂ ಸೇರಿದಂತೆ ದಿನಾಂಕ:01.08.2022ರ ಅಧಿಕೃತ ಜ್ಞಾಪನದಲ್ಲಿ ಸೇವೆಯಲ್ಲಿ ವಿಲೀನಗೊಳಿಸಿರುವ ಎಲ್ಲಾ ನೌಕರರಿಗೆ ಕಾಲ್ಪನಿಕ ವೇತನ ಬಡ್ತಿಯನ್ನು ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ, ಅವರುಗಳ ಹಿಂದಿನ ಸೇವೆಯನ್ನು ಪರಿಗಣಿಸಿ ಖಾಯಂ ಪೂರ್ವ ಅವಧಿಯನ್ನು ಘೋಷಣೆ ಮಾಡಿ, ನಂತರ ನಿಯಮಾನುಸಾರ ಕ್ರಮ ಜರುಗಿಸಬಹುದು.

ಮೇಲಿನ ಎಲ್ಲಾ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅವಗಾಹನೆಗಾಗಿ ತರುತ್ತಾ, ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

(ಕರಡು ಮಾನ್ಯಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

ಕುಲಸಚಿವರು

ವಿಷಯ ಸಂಖ್ಯೆ: 171.09

**ವಿಷಯ:** ಡೀನ್(ಶೈಕ್ಷಣಿಕ)ರವರ ನೇಮಕಾತಿ ಕುರಿತು.

* * * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಕಾಂಬ್ಳೆ ಅಶೋಕ್, ಪ್ರಾಧ್ಯಾಪಕರು, ಹಿಂದಿ ಅಧ್ಯಯನ ವಿಭಾಗ, ಇವರು ದಿನಾಂಕ: 20.11.2020ರಿಂದ ಡೀನ್(ಶೈಕ್ಷಣಿಕ) ರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಡಾ. ಎನ್. ಲಕ್ಷ್ಮಿ, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಇವರು ದಿನಾಂಕ: 15.03.2023ರಂದು ಮನವಿ ಪತ್ರವನ್ನು ಸಲ್ಲಿಸಿ, "1994ರಿಂದ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕಳಾಗಿ ಸೇವೆಗೆ ಸೇರಿದ್ದು, ಸಹ ಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಹಾಗು ವಿಭಾಗದ ಮುಖ್ಯಸ್ಥರಾಗಿ ಪ್ರಸ್ತುತದವರೆವಿಗೂ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸುಮಾರು 30 ವರ್ಷಗಳ ಕಾಲ ನಿರಂತರವಾಗಿ ಸೇವೆ ಸಲ್ಲಿಸಿದ್ದು, ಶೈಕ್ಷಣಿಕ ಅನುಭವ, ಸಮರ್ಥ ಹಾಗೂ ಅರ್ಹ ಅಭ್ಯರ್ಥಿಯಾಗಿದ್ದು, ವಿಶ್ವವಿದ್ಯಾನಿಲಯದ ಜವಾಬ್ದಾರಿಯುತವಾದ ಕೆಲಸಗಳನ್ನು ನಿರ್ವಹಿಸಲು ಆಸಕ್ತಳಾಗಿದ್ದು, ಸೇವಾನುಭವವನ್ನು ಪರಿಗಣಿಸಿ, ಡೀನ್(ಶೈಕ್ಷಣಿಕ) ಹುದ್ದೆಯನ್ನು ನಿರ್ವಹಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು" ಕೋರಿರುತ್ತಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡೀನ್(ಶೈಕ್ಷಣಿಕ) ನೇಮಕಾತಿ ಕುರಿತು ಕರಾಮುವಿ ಕಾಯ್ದೆಯ ಎರಡನೇ ಅನುಸೂಚಿಯ ಮೊದಲನೇ ಪರಿನಿಯಮದ ನಿಯಮ 4(1)ರನ್ವಯ ಈ ಕೆಳಗಿನಂತೆ ವಿವರಿಸಲಾಗಿದೆ:

(1) ವ್ಯವಸ್ಥಾಪನಾ ಮಂಡಳಿಯು ಪ್ರತಿಯೊಬ್ಬ ಡೀನರನ್ನು –
   (i) ನೇಮಕಗೊಳ್ಳಬೇಕಾದ ಅಭ್ಯರ್ಥಿಯು ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಉಪಾಧ್ಯಾಯನಾಗಿದ್ದರೆ, ಉಪಕುಲಪತಿಯವರ; ಮತ್ತು
   (ii) ನೇಮಕಗೊಳ್ಳಬೇಕಾದ ಅಭ್ಯರ್ಥಿಯು ವಿಶ್ವವಿದ್ಯಾನಿಲಯಕ್ಕೆ ಸಂಬಂಧ ಪಡದವನಾಗಿದ್ದರೆ; ಈ ಉದ್ದೇಶಕ್ಕಾಗಿ ರಚಿತವಾಗಿ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ನೇಮಕ ಮಾಡತಕ್ಕದ್ದು.

(2) ಪ್ರತಿಯೊಬ್ಬ ಡೀನರು ವಿಶ್ವವಿದ್ಯಾನಿಲಯದ ವೇತನ ಪಡೆಯುವ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕುದ್ದು;

ಪರಂತು, ಡೀನರ ಪೈಕಿ ಒಬ್ಬರು ಉಪಾಧ್ಯಾಯರ ಆಡಳಿತಾತ್ಮಕ ವ್ಯವಹಾರಗಳ ಪ್ರಭಾರದಲ್ಲಿ ತರತಕ್ಕದ್ದು ಎಂದಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಡೀನ್(ಶೈಕ್ಷಣಿಕ) ಹುದ್ದೆಯ ನೇಮಕ ಮಾಡುವ ಸಂಬಂಧ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಕುಲಸಚಿವ

(ಕರಡು ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

ವಿಷಯ ಸಂಖ್ಯೆ: 171.10

ವಿಷಯ: ಶ್ರೀ ಬಿ.ಜಿ ವಿರುಪಾಕ್ಷಯ್ಯ, ಸಹಾಯಕ ಕುಲಸಚಿವ, ಸಾಮಾನ್ಯ ವಿಭಾಗ, ಕರಾಮುವಿ, ಇವರ ಮೇಲೆ ಮಾಡಲಾದ ಆರೋಪವನ್ನು ರದ್ದುಪಡಿಸುವ ಬಗೆಗೆ.

*****

ಶ್ರೀ ಬಿ.ಜಿ ವಿರುಪಾಕ್ಷಯ್ಯ, ಸಹಾಯಕ ಕುಲಸಚಿವ, ಸಾಮಾನ್ಯ ವಿಭಾಗ, ಕರಾಮುವಿ,ಇವರು ದಿನಾಂಕ: 13.03.2023ರ ಪತ್ರದ ಮೂಲಕ ಇವರಿಗೆ 'ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿವಿ ನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 09 ಮತ್ತು 10 ರಂತೆ ದಿನಾಂಕ: 02.04.2019 ಷೋಕಾಸ್ ನೋಟಿಸ್' ಜಾರಿ ಮಾಡಲಾಗಿದ್ದು, ಸದರಿಯವರಿಗೆ ಆರೋಪಪಟ್ಟಿನ್ನು ಸಿದ್ಧಪಡಿಸಿ ಆರೋಪ-01 ರಿಂದ 03ರನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ಷೋಕಾಸ್ ನೋಟಿಸ್ ಮೂಲಕ ಮಾಡಲಾದ ಆರೋಪವನ್ನು ರದ್ದು ಪಡಿಸುವಂತೆ ಮನವಿ ಸಲ್ಲಿಸಿರುತ್ತಾರೆ.

ಶ್ರೀ ಬಿ.ಜಿ ವಿರುಪಾಕ್ಷಯ್ಯ, ಇವರಿಗೆ ಮೈಸೂರು ವಿವಿ ನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 09 ಮತ್ತು 10 ರಂತೆ ದಿನಾಂಕ: 02.04.2019 ಷೋಕಾಸ್ ನೋಟಿಸ್ ಜಾರಿ ಮಾಡಲಾಗಿದ್ದು ಸದರಿಯವರನ್ನು ದಿನಾಂಕ: 07.03.2022 ರ ಆದೇಶದ ಮೂಲಕ ಅಮಾನತ್ತುಗೊಳಿಸಲಾಗಿರುತ್ತದೆ. ಸದರಿಯವರು ಅಮಾನತ್ತನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಹಾಗೂ **ಮಾನ್ಯ ಕುಲಪತಿಗಳು 'Wirhdraw the Suspension order Since Shanumuga One man committee in their report did not mention the name of Virupakshaiah as well as there is a stay on suspension by Honorable Court of Karnataka' ಎಂದು ಆದೇಶಿಸಿರುವುದರಿಂದ, ಸದರಿಯವರ ಅಮಾನತ್ತನ್ನು ರದ್ದುಪಡಿಸಿ, ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವದಿ ಎಂದು ಪರಿಗಣಿಸಲಾಗಿರುತ್ತದೆ.** ಶ್ರೀ ಬಿ.ಜಿ ವಿರುಪಾಕ್ಷಯ್ಯ, ಇವರು ಅಧೀಕ್ಷಕ ಹುದ್ದೆಯ ಜೇಷ್ಠತೆ ಆಧಾರದನ್ವಯ ನ್ಯಾಯಾಲಯದ ಅಂತಿಮ ತೀರ್ಪಿಗೊಳಪಟ್ಟು ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಲಾಗಿರುತ್ತದೆ ಎಂಬುದನ್ನು ತಮ್ಮ ಅವಗಾಹನೆಗೆ ತರಲಾಗಿದೆ. ಈ ಸಂಬಂಧವಾಗಿ ಸದರಿಯವರು ವಿಶ್ವವಿದ್ಯಾನಿಲಯವು ಮಾಡಲಾದ ಆರೋಪ (Charges) ಅನ್ನು ರದ್ದು ಪಡಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP-14673/2022 ದಾವೆ ಹೂಡಿರುತ್ತಾರೆ, ಪ್ರಸ್ತುತ ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂಬುದನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ವಿವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿವಿ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 09 ಮತ್ತು 10 ರಂತೆ ದಿನಾಂಕ: 02.04.2019 ಷೋಕಾಸ್ ನೋಟಿಸ್ ಜಾರಿ ಮಾಡಲಾಗಿದ್ದು, ಸದರಿ ಪರಿನಿಯಮದ 09(2) ರಲ್ಲಿ "Whenever the disciplinary authority with or without making a preliminary inquiry, is of the opinion that there are grounds for inquiring into truth of any imputation of misconduct misbehavior against an employee, it may itself inquire into, or appoint under statute any other employee of the University or any person as inquiring officer to inquire into the truth thereof" ಎಂದಿರುತ್ತದೆ.

ಶ್ರೀ ಬಿ.ಜಿ ವಿರುಪಾಕ್ಷಯ್ಯ, ಇವರ ಮೇಲೆ ಮಾಡಲಾದ ಆರೋಪಕ್ಕೆ ಸರಿ ಸುಮಾರು 03 ವರ್ಷಗಳು ಕಳೆದರೂ ಮೇಲ್ಕಂಡ ನಿಯಮದಂತೆ ಸತ್ಯಾಸತ್ಯತೆಯನ್ನು ಪರಿಶೀಲಿಸಲು ವಿಚಾರಣಾಧಿರಿಗಳನ್ನು ನೇಮಕ ಮಾಡಿಲ್ಲದಿರುವುದನ್ನು ತಮ್ಮ ಅವಗಾಹನೆಗೆ ತರಲಾಗಿದೆ ಹಾಗೂ ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿಆಸುಇ 75 ಸೇಇವಿ 2018 ದಿನಾಂಕ: 15.04.2019 ರ ಕ್ರಮ ಸಂಖ್ಯೆ (7)ರಲ್ಲಿ ದೋಷಾರೋಪಣಾ ಪಟ್ಟಿಯನ್ನು ಹೊರಡಿಸಿ ಆರೋಪಿತ ಸರ್ಕಾರಿ ನೌಕರನ ರಕ್ಷಣಾ ಹೇಳಿಕೆಯನ್ನು ಪಡೆದ ನಂತರ ವಿಚಾರಣೆ

ನಡೆಸಬೇಕೆಂದು ಶಿಸ್ತು ಪ್ರಾಧಿಕಾರ ನಿರ್ಧರಿಸಿದಲ್ಲಿ, ಒಂದು ತಿಂಗಳೊಳಗಾಗಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ಏಕಕಾಲದಲ್ಲಿ ನೇಮಿಸಿ ಆದೇಶಿಸತಕ್ಕದ್ದು, ಎಂದಿರುತ್ತದೆ. ಆದರೆ ಸದರಿಯವರ ಪ್ರಕರಣದಲ್ಲಿ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿರುವುದಿಲ್ಲ ಎಂಬುದನ್ನು ಗಮನಿಸಬಹುದಾಗಿದೆ.

ಈ ಮಧ್ಯೆ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/18/ಸೇಇವಿ/2021 ದಿನಾಂಕ: 04.10.2021 ರ ಕ್ರಮ ಸಂಖ್ಯೆ-02 ರಲ್ಲಿ ' ಸರ್ಕಾರಿ ನೌಕರನ ಮೇಲಿನ ಆಪಾದಿತ ದುರ್ನಡತೆಗೆ ಶಿಸ್ತಿನ ಕ್ರಮ ಜರುಗಿಸಲು ಒಟ್ಟು 9 ತಿಂಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದ್ದು, ಸರ್ಕಾರದ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು ಈ ಸೂಚನೆಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಪಾಲಿಸಬೇಕೆಂದು ಹಾಗೂ ಇದನ್ನು ಸಂಬಂಧಪಟ್ಟ ಎಲ್ಲಾ ಶಿಸ್ತು ಪ್ರಾಧಿಕಾರಗಳ ಗಮನಕ್ಕೆ ಪಾಲನೆಗಾಗಿ ತರತಕ್ಕದೆಂದು ತಿಳಿಸಲಾಗಿದೆ. ಮುಂದುವರೆದರು, ಈ ಸೂಚನೆಗಳನ್ನು ಉಲ್ಲಂಘಿಸುವ ಅಧಿಕಾರಿಗಳು ತಾವೇ ಕರ್ತವ್ಯದ ಲೋಪದ ಆಧಾರದ ಮೇಲೆ ಶಿಸ್ತಿನ ಕ್ರಮಕ್ಕೆ ಒಳಪಡಬೇಕಾಗುತ್ತದೆ ಎಂದು ತಿಳಿಸಲಾಗಿದೆ (**ಪ್ರತಿ ಲಗತ್ತಿಸಿದೆ ಅನುಬಂಧ-ಅ**).

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/190/ಇತರೆ/2016-17 ದಿನಾಂಕ: 27.03.2017 ರನ್ವಯ ರಚಿಸಲಾದ ಸಮಿತಿಯ ವರದಿಯಲ್ಲಿ **"ಶ್ರೀ ಬಿ.ಜಿ ವಿರುಪಾಕ್ಷಯ್ಯ"** ಇವರ ಹೆಸರು ಪ್ರಸ್ತಾಪಿಸಿಲ್ಲ, ಆದಾಗ್ಯೂ ಸದರಿಯವರಿಗೆ ದಿನಾಂಕ: 02.04.2019 'ಷೋಕಾಸ್ ನೋಟಿಸ್' ಜಾರಿಗೊಳಿಸಿ ದೋಷರೋಪಣೆ ಪಟ್ಟಿ ಸಿದ್ಧಪಡಿಸಿ ಆರೋಪಮಾಡಲಾಗಿದ್ದಾದರೂ ಸಹ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿವಿ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 09(2) ಪ್ರಕಾರ ಕ್ರಮವಹಿಸದಿರುವುದರಿಂದ 'Lapses of Procedure' ಆಗುವ ಸಾಧ್ಯತೆ ಇರುವುದರಿಂದ **"ಶ್ರೀ ಬಿ.ಜಿ ವಿರುಪಾಕ್ಷಯ್ಯ" ಇವರ ಮೇಲೆ ಮಾಡಲಾದ ದೋಷರೋಪಣೆಯನ್ನು ರದ್ದುಗೊಳಿಸುವ ಸಂಬಂಧ 'ಶಿಸ್ತು ಪ್ರಾಧಿಕಾರವಾದ' ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಮುಂದೆ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯ ಮಂಡಿಸಿದೆ.**

ಕರಡು ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ.

ಕುಲಸಚಿವ

**ವಿಷಯ ಸಂಖ್ಯೆ :-** 171.11

ವಿಷಯ:- **ಕರಾಮುವಿಯ ಮಂಡಕಳ್ಳಿ ಬಳಿ ನಿರ್ಮಿಸಿರುವ ಶೈಕ್ಷಣಿಕ ಭವನದ ಕಟ್ಟಡ ಹಾಗೂ 10 ಎಕರೆ ಜಾಗಕ್ಕೆ ಬಾಡಿಗೆಯನ್ನು ನಿಗದಿಪಡಿಸುವ ಸಂಬಂಧ ಶುಲ್ಕವನ್ನು ಪಾವತಿಸುವ ಬಗ್ಗೆ.**

ಕರಾಮುವಿ ನಿಲಯಕ್ಕೆ ಸೇರಿರುವ ಮೈಸೂರಿನ ಮಂಡಕಳ್ಳಿಯ ಗ್ರಾಮದ ಬಳಿ ಇರುವ ಹತ್ತು ಎಕರೆಯ ವಿಸ್ತೀರ್ಣದ ಪ್ರದೇಶದಲ್ಲಿ ಸುಮಾರು 3735 Sqmtr ವಿಸ್ತೀರ್ಣದಲ್ಲಿ ನಿರ್ಮಿಸಲಾಗಿರುವ ಶೈಕ್ಷಣಿಕ ಭವನ ಕಟ್ಟಡವನ್ನು ಒಳಗೊಂಡಂತೆ ಪೂರ್ಣ ಪ್ರದೇಶವನ್ನು ಕರ್ನಾಟಕ ಸರ್ಕಾರದ IT/BT ಇಲಾಖೆಗೆ ಒಳಪಡುವ ಸಂಸ್ಥೆಯಾದ Karnataka Innovation & Technology Society (KITS) ಸಂಸ್ಥೆಯವರು ಮತ್ತು Karnataka Digital Economy Mission (KDEM) ಮೂಲಕ Global Technology Center Plug & Play Facility ಯೋಜನೆಯ ಸ್ಥಾಪಿಸುವ ಉದ್ದೇಶಕ್ಕಾಗಿ ಬಾಡಿಗೆಯ ಆಧಾರದ ಮೇಲೆ ನೀಡುವಂತೆ ವಿವಿನಿಲಯಕ್ಕೆ ಸಂಬಂಧಪಟ್ಟ ಇಲಾಖೆಯ ಅಧೀನ ಕಾರ್ಯದರ್ಶಿಗಳು ಪತ್ರದಲ್ಲಿ ತಿಳಿಸಿರುತ್ತಾರೆ.

ಈ ವಿಷಯವನ್ನು **ದಿನಾಂಕ: 26.08.2022** ರಂದು ಜರುಗಿದ **169ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು, ಸದರಿ ವಿಷಯವನ್ನು ಕೂಲಂಕುಶವಾಗಿ ಚರ್ಚಿಸಿದ ವ್ಯವಸ್ಥಾಪನ ಮಂಡಳಿಯ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ವಿವಿನಿಲಯದ ಪರವಾಗಿ ನುರಿತ ಪರಿಣಿತರ ಅಭಿಪ್ರಾಯ ಪಡೆದು, ಅಗತ್ಯ ಷರತ್ತುಗಳನ್ನು ಒಳಗೊಂಡಂತೆ ಕರಾರು ಒಪ್ಪಂದ ಮಾಡಿಕೊಂಡು ಮತ್ತು ಇದರ ಆಧಾರದ ಮೇಲೆ ಸದರಿ ಕಟ್ಟಡ ಹಾಗೂ ಪ್ರದೇಶವನ್ನು ಕೋರಿರುವ ಇಲಾಖೆಯವರಿಗೆ ಬಾಡಿಗೆಗೆ ನೀಡಲು Tripartite ಕರಾರಿನೊಂದಿಗೆ ಮುಂದಿನ ವ್ಯವಸ್ಥಾಪನ ಮಂಡಳಿಯ ಸಭೆಗೆ ಮಂಡಿಸುವಂತೆ ತಿಳಿಸಲಾಗಿರುತ್ತದೆ.**

ಅದರೆ ಕರ್ನಾಟಕ ಸರ್ಕಾರದ IT/BT ಇಲಾಖೆಯ ಅಧೀನ ಕಾರ್ಯದರ್ಶಿಗಳು ಸದರಿ ಕಟ್ಟಡ ಹಾಗೂ ಪ್ರದೇಶದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕೆಲಸವನ್ನು ಅತ್ಯಂತ ತುರ್ತಾಗಿ ನಿರ್ವಹಿಸಬೇಕಾಗಿರುವ ಹಿನ್ನಲೆಯಲ್ಲಿ ಕರಾರು ಒಡಂಬಡಿಕೆಯನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಿರುತ್ತಾರೆ. ಅಂತೆಯೇ ಸದರಿ ವಿಷಯವನ್ನು ಈಗಾಗಲೇ ಚರ್ಚಿಸಲಾಗಿದ್ದು KSOU, KITS ಹಾಗೂ KDEM ಮೂರು ಸಂಸ್ಥೆಯನ್ನು ಒಳಗೊಂಡಂತೆ ತ್ರಿಪಕ್ಷಿಯ (Tripartite) ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಮಾನ್ಯಕುಲಪತಿಗಳು ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಸಮರ್ಥನೆಯನ್ನು ಕಾಯ್ದಿರಿಸಿ ದಿನಾಂಕ:19.09.2022 ರಂದು ಅನುಮೋದನೆಯನ್ನು ನೀಡಿರುವ ಹಿನ್ನೆಲೆಯಲ್ಲಿ Tripartite ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ.

ಮುಂದುವರೆದು Tripartite ಕರಾರಿನ ಅನುಸಾರ KDEM ಹಾಗೂ KSOU ರವರು ಕರಾರಿನಲ್ಲಿ ಸದರಿ ಕಟ್ಟಡ ಒಳಗೊಂಡಂತೆ 10 ಎಕರೆ ಸ್ಥಳವನ್ನು 30 ವರ್ಷಗಳ ಅವಧಿಗೆ ಮತ್ತು ಪ್ರತಿ **ವರ್ಷಕ್ಕೆ ರೂ. 14,50,000/-ಗಳ** ಬಾಡಿಗೆಯನ್ನು ವಿವಿನಿಲಯಕ್ಕೆ ಪಾವತಿಸುವಂತೆ ಹಾಗೂ ಈ ಬಾಡಿಗೆಯನ್ನು ಪ್ರತಿ 05 ವರ್ಷಕ್ಕೊಮ್ಮೆ ಪುನರ್ ನಿಗದಿಪಡಿಸಿಕೊಳ್ಳುವಂತೆ ಮತ್ತು ಇತರೆ ಷರತ್ತುಗಳನ್ನು ಒಳಪಟ್ಟಂತೆ ಬಾಡಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ.

ಅಂತೆಯೇ ಸದರಿ ವಿಷಯವನ್ನು **170ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಸದರಿ ಕಟ್ಟಡ ಹಾಗೂ ಸ್ಥಳವನ್ನು ಬಾಡಿಗೆ ನೀಡಿರುವುದರ ಬಗ್ಗೆ ಅನುಸಮರ್ಥನೆಗಾಗಿ ಮಂಡಿಸಲಾಗಿತ್ತು. ಸದರಿ ವಿಷಯದ ಬಗ್ಗೆ ವ್ಯವಸ್ಥಾಪನ ಮಂಡಳಿಯ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ KDEM ಸಂಸ್ಥೆಯವರಿಗೆ ಸಂಪೂರ್ಣ ಕಟ್ಟಡ ಹಾಗೂ ಜಾಗವನ್ನು ನೀಡಲು ಸಭೆಯು ಸರ್ವಾನುಮತದಿಂದ ಸಭೆಯು ಒಪ್ಪಿಗೆ ನೀಡಿತು.** ಅಂತೆಯೇ ಇದರ ಜೊತೆ ಸದರಿ ಜಾಗ ಹಾಗೂ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸಿ ಕೊಡುವಂತೆ ಲೋಕೋಪಯೋಗಿ ಇಲಾಖೆಗೆ ಈ ಹಿಂದೆ ದಿನಾಂಕ:14.07.2022 ಪತ್ರ ಬರೆಯಲಾಗಿರುತ್ತದೆ.

ಪ್ರಸ್ತುತ ಲೋಕೋಪಯೋಗಿ ಇಲಾಖೆಯವರು ಸದರಿ ಕಟ್ಟಡ ಹಾಗೂ ಜಾಗದ ಬಾಡಿಗೆಯನ್ನು ಪ್ರತಿ **ಮಾಹೆಗೆ ರೂ. 14,61,800.00** ಗಳಿಗೆ ನಿಗದಿ ಪಡಿಸಿದ್ದು ಕರ್ನಾಟಕ ಪಿಡಬ್ಲೂಡಿ ಕೋಡ್ 2014 ನಿಯಮ 318 (6) ಪ್ರಕಾರ ಬಾಡಿಗೆ ನಿಗದಿ ಪಡಿಸಿರುವ ಸೇವಾಶುಲ್ಕ ಒಟ್ಟು **ರೂ. 11,26,986.00** ಗಳನ್ನು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು, ಇವರ ಹೆಸರಿಗೆ ಡಿ.ಡಿ ಮೂಲಕ ಪಾವತಿಸುವಂತೆ ತಿಳಿಸಿರುತ್ತಾರೆ. ಆದುದರಿಂದ ಸದರಿ ವಿಷಯವನ್ನು ಘನ ವ್ಯವಸ್ಥಾಪನ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ **ರೂ. 11,26,986.00** ಗಳ ಶುಲ್ಕವನ್ನು ಲೋಕೋಪಯೋಗಿ ಇಲಾಖೆಗೆ ಪಾವತಿಸುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**(ಕರಡು ಪ್ರತಿ ಮಾನ್ಯ ಕುಲಪತಿರವರಿಂದ ಅನುಮೋದಿಸಲ್ಪಟ್ಟಿದೆ)**

**ಕುಲಸಚಿವ**

**ವಿಷಯ ಸಂಖ್ಯೆ :-** 171.12

ವಿಷಯ:- **ಕರಾಮುವಿ ನಿಲಯದ ಪ್ರಾದೇಶಿಕ ಕೇಂದ್ರಗಳಿಗೆ UPS ಗಳನ್ನು ಹೊಸದಾಗಿ ಖರೀದಿಸಿ ಅಳವಡಿಸುವ ಬಗ್ಗೆ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರಾಮುವಿ ನಿಲಯವು ಒಟ್ಟು 23 ಪ್ರಾದೇಶಿಕ ಕೇಂದ್ರಗಳನ್ನು ಹೊಂದಿದ್ದು ಅದರಲ್ಲಿ 09 ಸ್ವಂತ ಕಟ್ಟಡಗಳು ಮತ್ತು 14 ಬಾಡಿಗೆಯ ಕಛೇರಿಗಳನ್ನು ಹೊಂದಿರುತ್ತದೆ. ಎಲ್ಲಾ ಪ್ರಾದೇಶಿಕ ಕೇಂದ್ರಗಳಲ್ಲಿ ವಿದ್ಯುತ್ ಕಡಿತಗೊಂಡ ಸಂಧರ್ಭದಲ್ಲಿ ಪ್ರವೇಶಾತಿ ಮಾಡಲು ಹಾಗೂ ಪರೀಕ್ಷಾ ಸಂಧರ್ಭದಲ್ಲಿ ತೊಂದರೆಯಾಗುತ್ತಿದ್ದು ಮತ್ತು ಕಛೇರಿ ಕೆಲಸಗಳಿಗೆ ಅಡಚಣೆ ಆಗುತ್ತಿರುವುದರಿಂದ ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು **UPS** ಗಳನ್ನು ಅಳವಡಿಕೊಡುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಅದುದರಿಂದ ಕರಾಮುವಿಯ 23 ಪ್ರಾದೇಶಿಕ ಕೇಂದ್ರಗಳಿಗೆ ಹೊಸದಾಗಿ **3 KVA UPS** ಗಳನ್ನು ಅಳವಡಿಸಬೇಕಾಗಿರುತ್ತದೆ. ಈ ಸಂಬಂಧ ಸದರಿ ಕೆಲಸವನ್ನು ನಿರ್ವಹಿಸಲು ಸ್ಥಳಿಯ ಮಾರುಕಟ್ಟೆಯಲ್ಲಿ ವಿಚಾರಿಸಲಾಗಿದ್ದು ರೂ. 38.00 ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ಅದುದರಿಂದ ಸದರಿ ಕೆಲಸವನ್ನು ತುರ್ತಾಗಿ ನಿರ್ವಹಿಸಬೇಕಾಗಿರುವ ಕಾರಣ ಸರ್ಕಾರಿ ಸ್ವಾಮ್ಯದ 4(ಜಿ) ವಿನಾಯಿತಿ ಹೊಂದಿರುವ ಯಾವುದಾದರು ಸಂಸ್ಥೆಯಿಂದ/ **GEM** / ಅಲ್ಪಾವಧಿ ಟೆಂಡರ್ ಕರೆದು ಕೆಲಸವನ್ನು ನಿರ್ವಹಿಸಲು ಸದರಿ ವಿಷಯವನ್ನು ವ್ಯವಸ್ಥಾಪನ ಮಂಡಳಿಯ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

(ಕರಡು ಪ್ರತಿ ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

**ಕುಲಸಚಿವ**

ವಿಷಯ ಸಂಖ್ಯೆ: 171.13

**ವಿಷಯ: 25ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.**

*****

ದಿನಾಂಕ: 15–03–2023 ರಂದು ನಡೆದ 25ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ದಿನಾಂಕ: 18–03–2023 ರಂದು ನಡೆಯಲಿರುವ 171ನೇ ವ್ಯವಸ್ಥಾಪನಾ ಮಂಡಳಿ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ಕುಲಸಚಿವ**

**(ಕರಡು ಮಂಡನೆಗೆ ಕುಲಪತಿಗಳ ಅನುಮೋದನೆ ಪಡೆಯಲಾಗಿದೆ)**

ವಿಷಯ ಸಂಖ್ಯೆ: 171.14

**ವಿಷಯ**: ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕರುಗಳಿಗೆ ವಾರ್ಷಿಕ ವೇತನ ಬಡ್ತಿ, ಯುಜಿಸಿ 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತ ಹಾಗೂ ವೃತ್ತಿ ಪದೋನ್ನತಿ ಯೋಜನೆ (CAS) ಯಡಿಯಲ್ಲಿ ಪದೋನ್ನತಿ ಹಾಗೂ ಗ್ರಂಥಪಾಲಕರಿಗೆ ವಾರ್ಷಿಕ ವೇತನ ಬಡ್ತಿ, ಯುಜಿಸಿ 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಬಿಡುಗಡೆ ಮಾಡುವ ಕುರಿತು.

* * * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಡಿಸೆಂಬರ್-2012ರ ನೇರ ನೇಮಕಾತಿಯಲ್ಲಿ ಸಹ ಪ್ರಾಧ್ಯಾಪಕರು ಹಾಗೂ ಗ್ರಂಥಪಾಲಕರನ್ನು ನೇಮಕ ಮಾಡಿ ಆದೇಶ ಹೊರಡಿಲಾಗಿರುತ್ತದೆ. ಭಾರತ ಲೆಕ್ಕ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರು Compliance Audit on "Appointment Extension of UGC Pay Scales to Teaching Staff" ಎಂಬ ವಿಚಾರದಲ್ಲಿ 2017ರ ಮೇ ಮಾಹೆಯಲ್ಲಿ ಪರಿಶೀಲನೆ ನಡೆಸಿ ವಿವಿಧ ವಿಷಯಗಳಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿ Appointment of Associate Professors and Direct Recruitment of Librarian ಈ ವಿಷಯಗಳಿಗೆ ಆಡಿಟ್ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ { ಸಂಖ್ಯೆ: 46/4.1.3.2(ಎ) ಮತ್ತು 50/4.1.3.2(ಡಿ) }.

ದಿನಾಂಕ: 31.03.2017ಕ್ಕೆ ಅಂತ್ಯಗೊಂಡ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ವರದಿಯ ಕಂಡಿಕೆ ಸಂಖ್ಯೆ: 46/4.1.3.2(ಎ) ಮತ್ತು 50/4.1.3.2(ಡಿ) ರಲ್ಲಿ ಕ್ರಮವಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಮೂರು ಸಹ ಪ್ರಾಧ್ಯಾಪಕರ ನೇಮಕಾತಿಯಲ್ಲಿ 300 ಎಪಿಐ ಅಂಕಗಳನ್ನು ಪಡೆಯದೇ ಇರುವವರಿಗೆ ನೇಮಕಾತಿ ಮಾಡಿರುವುದನ್ನು, ಸಹ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಅರೆಕಾಲಿಕ/ಅತಿಥಿ ಉಪನ್ಯಾಸಕರ ಅನುಭವವನ್ನೇ ಬೋಧನಾ ಅನುಭವವನ್ನಾಗಿ ಪರಿಗಣಿಸಿರುವುದನ್ನು ಆಕ್ಷೇಪಿಸಿ ಹಾಗೂ ಗ್ರಂಥಪಾಲಕರ ನೇಮಕಾತಿಗೆ ಯು.ಜಿ.ಸಿ ನಿಗಧಿಪಡಿಸಿದ್ದ ಕನಿಷ್ಟ ಸೇವಾ ಅನುಭವಕ್ಕೆ ವಿರುದ್ಧವಾಗಿ ಐದು ವರ್ಷ ಎಂಟು ತಿಂಗಳು ಅನುಭವವಿದ್ದ ಡಾ. ಕೆ. ಪ್ರಕಾಶ್‌ರವರನ್ನು ಗ್ರಂಥಪಾಲಕರನ್ನಾಗಿ ನೇಮಿಸಿರುದನ್ನು ಆಕ್ಷೇಪಿಸಿರುತ್ತಾರೆ. ಆದುದರಿಂದ ದಿನಾಂಕ: 16.10.2019ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿನ ನಿರ್ದೇಶನದಂತೆ, ನಿಯಮಬಾಹಿರ ನೇಮಕಾತಿಗಳನ್ನು ರದ್ದುಪಡಿಸುವ ಸಂಬಂಧ ಅಗತ್ಯ ಕ್ರಮ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ **ಸರ್ಕಾರದ ಪತ್ರ ಸಂಖ್ಯೆ: ಇಡಿ 311 ಯುಒವಿ 2018, ದಿನಾಂಕ: 17.10.2019ರ** ಪತ್ರದಲ್ಲಿ ನಿರ್ದೇಶನ ನೀಡಲಾಗಿರುತ್ತದೆ.

ಅದರಂತೆ ವಿಶ್ವವಿದ್ಯಾನಿಲಯವು ಕ್ರಮವಹಿಸಿ, ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ವರದಿಯ ಕಂಡಿಕೆಯನ್ನಾಧರಿಸಿ ಸರ್ಕಾರದ ಪತ್ರದ ನಿರ್ದೇಶನದಂತೆ ತಮ್ಮಗಳ ನೇಮಕಾತಿಯನ್ನು ರದ್ದುಗೊಳಿಸಬಾರದೇಕೆ ಎಂಬುದರ ಕುರಿತು ಲಿಖಿತ ಸಮಜಾಯಿಸಿಯನ್ನು ನೀಡುವಂತೆ ಮೂವರು ಸಹ ಪ್ರಾಧ್ಯಾಪಕರುಗಳಾದ 1. ಡಾ. ತೇಜಸ್ವಿ ನವಿಲೂರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ 2. ಡಾ. ಶಂಕರನಾರಣಪ್ಪ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ 3. ಡಾ. ಎಂ.ಎಸ್. ರಮಾನಂದ, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಮತ್ತು ಗ್ರಂಥಪಾಲಕರಾದ ಡಾ. ಕೆ. ಪ್ರಕಾಶ್, ಇವರುಗಳಿಗೆ **'ಷೋಕಾಸ್ ನೋಟೀಸ್'**ನ್ನು **ದಿನಾಂಕ**: 18.10.2019ರಂದು ನೀಡಲಾಗಿರುತ್ತದೆ. ಈ ಸಂಬಂಧ ಕೈಗೊಂಡಿರುವ ಕ್ರಮದ ವರದಿಯನ್ನು **ದಿನಾಂಕ: 18.10.2019**ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರಿಗೆ ಸಲ್ಲಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯವು ನೀಡಲಾಗಿರುವ 'ಷೋಕಾಸ್ ನೋಟೀಸ್'ನ್ನು ಪ್ರಶ್ನಿಸಿ ಸದರಿ ಸಹ ಪ್ರಾಧ್ಯಾಪಕರುಗಳು ಹಾಗೂ ಗ್ರಂಥಪಾಲಕರು ಮಾನ್ಯ ಉಚ್ಛನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: 52302/2019, 52328/2019 ಮತ್ತು 52325/2019 ದಾಖಲಿಸಿದ್ದು, ಪ್ರಸ್ತುತ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದ್ದು, ಯಾವುದೇ ತೀರ್ಮಾನವಾಗಿರುವುದಿಲ್ಲ.

ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ಸಾಮಾನ್ಯ ಮತ್ತು ಸಾಮಾಜಿಕ ವಲಯಗಳ ವರದಿಯ ಕಂಡಿಕೆ ಸಂಖ್ಯೆ: 4.1.3.2(ಎ) ಮತ್ತು 4.1.3.2(ಡಿ) ಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಸರ್ಕಾರಕ್ಕೆ ವಿವಿಧ ದಿನಾಂಕಗಳಂದು ಅನುಪಾಲನ ವರದಿ ಸಲ್ಲಿಸಲಾಗಿದೆ. ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ

(2020-21) ಹದಿನೈದನೇ ವಿಧಾನಸಭೆ, ಆರನೇ ವರದಿಯಲ್ಲಿಯೂ ಸಹ ಸದರಿಯವರ ನೇಮಕಾತಿ ಸಂಬಂಧ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಈ ಸಂಬಂಧ ಸರ್ಕಾರಕ್ಕೆ ವರದಿ ಹಾಗೂ ದಾಖಲಾತಿಗಳನ್ನು ಸಲ್ಲಿಸಲಾಗಿರುತ್ತದೆ.

**ಸರ್ಕಾರದ ಪತ್ರ ಸಂಖ್ಯೆ: ಇಡಿ 75 ಯುಎನ್ಇ 2023, ದಿನಾಂಕ: 04.01.2023ರಲ್ಲಿ** ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಬರುವ ರಾಜ್ಯ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದಂತೆ 2016-17ನೇ ಸಾಲಿನ ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಾಮಾನ್ಯ ಮತ್ತು ಸಾಮಾಜಿಕ ವಲಯ) ವರದಿಯಲ್ಲಿನ ಬೋಧನಾ ಸಿಬ್ಬಂದಿ ನೇಮಕಾತಿ, ಪದೋನ್ನತಿ ಹಾಗೂ ವೇತನ ನಿಗದಿಯ ವಿಷಯಾಧಾರಿತ ಲೆಕ್ಕಪರಿಶೋಧನಾ ಕಂಡಿಕೆ 4.1/2016-17ರ [ ಕಂಡಿಕೆ ಸಂಖ್ಯೆ: 4.1.3.1 (ಎ), 4.1.3.2(ಎ) ಮತ್ತು 4.1.3.2(ಡಿ) ]ಕುರಿತು ದಿನಾಂಕ: 22.11.2022ರಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸಭೆ ನಡೆದಿದ್ದು, ಸದರಿ ಸಭೆಯಲ್ಲಿ ಕೈಗೊಂಡ ನಿರ್ಣಯದನ್ವಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಕಂಡಿಕೆಗಳಿಗೆ ಕ್ರಮವಹಿಸಿ ಸೂಕ್ತ ವರದಿಯನ್ನು ಸಲ್ಲಿಸುವಂತೆ ಹಾಗೂ ನಿಯಮಬಾಹಿರ ನೇಮಕಾತಿಗೆ ಸಂಬಂಧಿಸಿದಂತೆ ಕಾರಣಕರ್ತರಾದ ಅಧಿಕಾರಿ ಹಾಗೂ ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮಕೈಗೊಂಡು, ಕೈಗೊಂಡ ಕ್ರಮದ ವರದಿಯನ್ನು ಸಲ್ಲಿಸುವಂತೆ ತಿಳಿಸಿರುತ್ತಾರೆ.

ಸದರಿ ಸರ್ಕಾರದ ಪತ್ರಕ್ಕೆ ಕ್ರಮ ವಹಿಸುವ ಸಂಬಂಧ ಒಂದು ಪರಿಶೀಲನಾ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ವಿಶ್ವವಿದ್ಯಾನಿಲಯವು ಕೈಗೊಳ್ಳಬಹುದಾದ ಕ್ರಮದ ಬಗೆಗಿನ ವಿವರವಾದ ವರದಿಯನ್ನು ಕುಲಸಚಿವರಿಗೆ ಸಲ್ಲಿಸಿರುತ್ತಾರೆ. ಸರ್ಕಾರಕ್ಕೆ ವರದಿ ಸಲ್ಲಿಸುವ ಸಂಬಂಧದಲ್ಲಿ ಕ್ರಮವಹಿಸಲಾಗುತ್ತಿದೆ.

ಡಾ. ತೇಜಸ್ವಿ ನವಿಲೂರು, ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ಇವರು ಸಿದ್ಧಪಾಠಗಳನ್ನು ನಿಗದಿತ ಸಮಯದಲ್ಲಿ ಸಲ್ಲಿಸದೇ ಇರುವ ಬಗ್ಗೆ ಹಾಗೂ ಸ್ನಾತಕೋತ್ತರ ಅಧ್ಯಯನ ಮಂಡಳಿ ಅಧ್ಯಕ್ಷರಾಗಿ ಸಭೆಗಳನ್ನು ನಡೆಸದೇ ಇರುವ ಸಂಬಂಧ ಸದರಿಯವರನ್ನು ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/626/2022-23, ದಿನಾಂಕ: 31.03.2022ರನ್ವಯ ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ಈ ಸಂಬಂಧ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ತೀರ್ಮಾನಿಸಿ, ಶ್ರೀ ಗೋಪಾಲ್, ನಿವೃತ್ತ ನ್ಯಾಯಾಧೀಶರು, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿ ವಿಚಾರಣೆಯನ್ನು ನಡೆಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/626/2022-23, ದಿನಾಂಕ: 09.09.2022ರನ್ವಯ **ಸದರಿಯವರ ವಿರುದ್ಧ ನಡೆಸಲಾಗುತ್ತಿರುವ ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತ್ತು ಆದೇಶವನ್ನು ಹಿಂಪಡೆಯಲಾಗಿರುತ್ತದೆ**. ಪ್ರಸ್ತುತ ವಿಚಾರಣೆಯು ನಡೆಯುತ್ತಿದ್ದು, ಇನ್ನೂ ಪೂರ್ಣಗೊಂಡಿರುವುದಿಲ್ಲ.

**ಸಹ ಪ್ರಾಧ್ಯಾಪಕರುಗಳಾದ ಡಾ. ಶಂಕರನಾರಾಣಪ್ಪ, ಡಾ. ಎಂ.ಎಸ್. ರಮಾನಂದ, ಡಾ. ತೇಜಸ್ವಿ ನವಿಲೂರು ಇವರುಗಳಿಗೆ ಕ್ರಮವಾಗಿ 2020ನೇ ಸಾಲಿನಿಂದ ವಾರ್ಷಿಕ ವೇತನ ಬಡ್ತಿ, 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತ ಹಾಗೂ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ಪದೋನ್ನತಿಯನ್ನು ಮತ್ತು ಡಾ. ಕೆ. ಪ್ರಕಾಶ್, ಗ್ರಂಥಪಾಲಕರು, ಇವರಿಗೆ 2017ನೇ ಸಾಲಿನಿಂದ ವಾರ್ಷಿಕ ವೇತನ ಬಡ್ತಿ ಮತ್ತು 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಬಿಡುಗಡೆಗೊಳಿಸಿರುವುದಿಲ್ಲ.**

ಡಾ. ಶಂಕರನಾರಾಣಪ್ಪ, ಡಾ. ಎಂ.ಎಸ್. ರಮಾನಂದ, ಮನವಿ ಪತ್ರಗಳನ್ನು ಸಲ್ಲಿಸಿ ತಡೆಹಿಡಿಯಲಾಗಿರುವ ವಾರ್ಷಿಕ ವೇತನ ಬಡ್ತಿ ಯು.ಜಿ.ಸಿ. 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತ ಹಾಗೂ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ಪದೋನ್ನತಿಯನ್ನು ಮತ್ತು ಡಾ. ಕೆ. ಪ್ರಕಾಶ್, ಗ್ರಂಥಪಾಲಕರು, ಇವರು ಮನವಿ ಪತ್ರವನ್ನು ಸಲ್ಲಿಸಿ ತಡೆಹಿಡಿಯಲಾಗಿರುವ ವಾರ್ಷಿಕ ವೇತನ ಬಡ್ತಿ ಮತ್ತು ಯು.ಜಿ.ಸಿ. 7ನೇ ಪರಿಷ್ಕೃತ ವೇತನದ ಹಿಂಬಾಕಿ ಮೊತ್ತವನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಡಾ. ತೇಜಸ್ವಿ ನವಿಲೂರುರವರು ಯಾವುದೇ ಮನವಿ ಪತ್ರವನ್ನು ಸಲ್ಲಿಸಿರುವುದಿಲ್ಲ.

ಮೇಲಿನ ಎಲ್ಲಾ ಅಂಶಗಳನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ಕುಲಸಚಿವ**

(ಕರಡು ಮಾನ್ಯ ಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)

**ವಿಷಯ ಸಂಖ್ಯೆ: 171.**15

**ವಿಷಯ :** ಹಣಕಾಸು ಸಮಿತಿಯ 86ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ

** ** ** ** **

ದಿನಾಂಕ:17/03/2023 ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ 86ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿಯ 171ನೇ ಸಾಮಾನ್ಯ ಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

(ವಿಷಯ ಮಂಡನೆಗೆ ಕುಲಪತಿಗಳ ಅನುಮೋದನೆಯನ್ನು ಪಡೆಯಲಾಗಿದೆ)

ಹಣಕಾಸು ಅಧಿಕಾರಿ

ವಿಷಯ ಸಂಖ್ಯೆ : 171.16

**ವಿಷಯ** : ಶ್ರೀ ಪುಟ್ಟಮಾದಯ್ಯ ಗ್ರಂಥಾಲಯ ಸಹಾಯಕ, ಗ್ರಂಥಾಲಯ ವಿಭಾಗ, ಕರಾಮುವಿ, ಮೈಸೂರು, ಇವರ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಪದೋನ್ನತಿ ನೀಡುವಂತೆ ಸಲ್ಲಿಸಿರುವ ಮನವಿ ಕುರಿತು.

******

ಶ್ರೀ ಪುಟ್ಟಮಾದಯ್ಯ ಗ್ರಂಥಾಲಯ ಸಹಾಯಕ, ಗ್ರಂಥಾಲಯ ವಿಭಾಗ, ಕರಾಮುವಿ, ಮೈಸೂರು, ಇವರು ಗ್ರಂಥಾಲಯದಲ್ಲಿ ಗ್ರಂಥಾಲಯದ ಸಹಾಯಕನಾಗಿ ಕಾರ್ಯ ನಿರ್ವಹಿಸುತ್ತಿದ್ದು, ನಾನು ಸಹಾಯಕ ಗ್ರಂಥಪಾಲಕ ಪದೋನ್ನತಿ ಹೊಂದಲು ಅರ್ಹನಾಗಿರುತ್ತೇನೆ. ವಿಶ್ವವಿದ್ಯಾನಿಲಯದ ಪರಿನಿಯಮದ ನಿಯಮದ ಪ್ರಕಾರ ಸಹಾಯಕ ಗ್ರಂಥಪಾಲಕ ಹುದ್ದೆಗೆ ಪದೋನ್ನತಿ ಪಡೆಯಲು ಅರ್ಹನಾಗಿರುತ್ತೇನೆ. ನಾನು 16 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದೇನೆ, ಖಾವಂದರಾದ ತಾವು ನನಗೆ ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕ ಹುದ್ದೆಗೆ ಪದೋನ್ನತಿ ನೀಡುವಂತೆ ಕೋರಿ ದಿನಾಂಕ:15.03.2023 ರಂದು ಮನವಿಯನ್ನು ಸಲ್ಲಿಸಿರುತ್ತಾರೆ.

- ವಿಶ್ವವಿದ್ಯಾನಿಲಯಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ 01 ಹುದ್ದೆ ಹಾಗೂ ಸರ್ಕಾರಿ ಪತ್ರ ಸಂಖ್ಯೆ:ಇಡಿ 22 ಯುಓವಿ 2007, ದಿನಾಂಕ:10.07.2007 ರಲ್ಲಿ 01 ಹುದ್ದೆ ಸೇರಿದಂತೆ ಒಟ್ಟಾರೆ 02 ಸಹಾಯಕ ಗ್ರಂಥಪಾಲಕ ಹುದ್ದೆಗಳು ಸೃಜನೆಯಾಗಿರುತ್ತವೆ.
- ಸರ್ಕಾರದ ನಿರ್ದೇಶನದನ್ವಯ ಕರಾಮುವಿಯಲ್ಲಿ ಅನುಚ್ಛೇಧ 371 ಜೆ ರನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಅನ್ವಯವಾಗುವಂತೆ ಸ್ಥಳೀಯ ವೃಂದ ರಚಿಸಿ ದಿನಾಂಕ: 27.01.2017 ರನ್ವಯ ಸಹಾಯಕ ಗ್ರಂಥಪಾಲಕ 02 ಹುದ್ದೆಗಳನ್ನು ನೇರ ನೇಮಕಾತಿ ಹುದ್ದೆಗಳು ಎಂದು ಗುರುತಿಸಲಾಗಿದ್ದು, ಈಗಾಗಲೇ 01 ಸಹಾಯಕ ಗ್ರಂಥಪಾಲಕ ಹುದ್ದೆಯನ್ನು ದಿನಾಂಕ:05.05.2007ರ ಅಧಿಸೂಚನೆಯಂತೆ ನೇರ ನೇಮಾಕಾತಿಯಲ್ಲಿ ಭರ್ತಿ ಮಾಡಿಕೊಳ್ಳಲಾಗಿರುತ್ತದೆ. ಬಾಕಿ ಇರುವ 01 ನೇರ ನೇಮಕಾತಿ ಸಹಾಯಕ ಗ್ರಂಥಪಾಲಕ ಹುದ್ದೆಯು ಅನುಚ್ಛೇಧ 371 ಜೆ ರನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಲಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಗ್ರಂಥಪಾಲಕ ಹುದ್ದೆ ಪದೋನ್ನತಿಗೆ ಮೀಸಲಿರಿಸಿರುವುದಿಲ್ಲ.
- ಶ್ರೀ ಪುಟ್ಟಮಾದಯ್ಯ ಗ್ರಂಥಾಲಯ ಸಹಾಯಕ, ಗ್ರಂಥಾಲಯ ವಿಭಾಗ, ಕರಾಮುವಿ, ಮೈಸೂರು, ಇವರು ಈ ಹಿಂದೆ ದಿನಾಂಕ:15.12.2022ರಂದು ಸಹ ಮನವಿ ಸಲ್ಲಿಸಲಾಗಿದ್ದು, ಸದರಿ ವಿಚಾರವಾಗಿ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಗ್ರಂಥಪಾಲಕ ಹುದ್ದೆ ಪದೋನ್ನತಿಗೆ ಮೀಸಲಿರಿಸಿರುವುದಿಲ್ಲ, ಆದ್ದರಿಂದ ನಿಮ್ಮ ಮನವಿಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ ಎಂದು ದಿನಾಂಕ:16.01.2023ರಂದು ಹಿಂಬರಹವನ್ನು ನೀಡಲಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅವಗಾಹನೆಗಾಗಿ ತರುತ್ತಾ, ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಕುಲಸಚಿವ

(ಕರಡು ಮಾನ್ಯಕುಲಪತಿಗಳಿಂದ ಅನುಮೋದಿಸಲ್ಪಟ್ಟಿದೆ)